# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY



ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA








ಸಂಪುಟ:01 • ಸಂಚಿಕೆ:216 • ನೋಂದಣಿ ನಂ.:KARKAN27911 • ವಿಜಯನಗರ • 21.01.2024 • ಭಾನುವಾರ • ಪುಟ:04 • ಬೆಲೆ:2
Volume:01 • Issue:216 • Reg.No:KARKAN27911 • VIJAYANAGARA • 21.01.2024 • Sunday • Page:04 • Rs:2


ಮೈಕ್ರೋ ನ್ಯೂಸ್

## ಸಂವಿಧಾನ ಜಾಗೃತಿ ಜಾಥಾಕ್ಕೆ ಸಚಿವರಿಂದ ಜ.26 ರಂದು ಚಾಲನೆ

**ಹಂಪಿ ಟೈಮ್ಸ್ ಹೊಸಪೇಟೆ**




ಸಂವಿಧಾನ ಜಾಗೃತಿ ಜಾಥಾಕಾರ್ಯಕ್ರಮಕ್ಕೆ ವಸತಿ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಹಾಗೂ ವಿಜಯನಗರ ಜಿಲ್ಲೆಯ ಉಸ್ತವಾರಿ ಸಚಿವ ಬಿ.ಜೆಡ್.ಜಮೀರ್ ಅಹಮ್ಮದ್ ಡಾ. ಪುನೀತ್‌ರಾಜಕುಮಾರ್ ಕ್ರೀಡಾಂಗಣದಲ್ಲಿ ಜ.26ರ ಬೆಳಗ್ಗೆ 9 ಗಂಟೆಗೆ ಚಾಲನೆ ನೀಡಲಿದ್ದಾರೆ. ಈ ಜಾಥಾವು ಜಿಲ್ಲೆಯ 137 ಗ್ರಾಮ ಪಂಚಾಯಿತಿಗಳು ಸೇರಿದಂತೆ 08 ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲಿ ಒಟ್ಟು 28 ದಿನಗಳು ಸಂಚರಿಸಲಿದೆ. ಈ ವೇಳೆ ಸಂವಿಧಾನದ ಬಗ್ಗೆ ಅರಿವು ಮೂಡಿಸಲಾಗುತ್ತದೆ.ಈಕಾರ್ಯಕ್ರಮಕ್ಕೆ ಜನಪ್ರತಿನಿಧಿಗಳು, ಅಧಿಕಾರಿಗಳು, ಸಂಘ-ಸಂಸ್ಥೆಗಳ ಮುಖಂಡರು, ವಿದ್ಯಾರ್ಥಿಗಳು ಸೇರಿದಂತೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಮಂಜುನಾಥ.ಹೆಚ್.ವಿ ತಿಳಿಸಿದ್ದಾರೆ.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com


# ಸಿರಿಧಾನ್ಯ ಬೆಳೆದರೆ ಆರೋಗ್ಯ ವೃದ್ಧಿ

**ಜಂಟಿ ಕೃಷಿ ನಿರ್ದೇಶಕ ಡಾ. ಶರಣಪ್ಪ ಮುದಗಲ್ ಸಲಹೆ। ಸಾವಯವ ಮತ್ತು ಸಿರಿಧಾನ್ಯ ಮೇಳ**



**ಹಂಪಿ ಟೈಮ್ಸ್ ಹೊಸಪೇಟೆ**

ವಾತಾವರಣದ ಏರುಪೇರು ರೈತರನ್ನು ಕಂಗೆಡಿಸಿದ್ದು, ಹವಾಮಾನ ವೈಪರೀತ್ಯ ಎದುರಿಸುವ ಸಾಮರ್ಥ್ಯ ಪಡೆದ ಸಿರಿಧಾನ್ಯ ಗಳನ್ನು ಬೆಳೆಯಲು ಕೃಷಿಕರು ಮುಂದಾಗಬೇಕು ಎಂದು ಜಂಟಿ ಕೃಷಿ ನಿರ್ದೇಶಕ ಡಾ. ಶರಣಪ್ಪ ಮುದಗಲ್ ಸಲಹೆ ಮಾಡಿದರು.

ಸಹಜ ಸಮೃದ್ಧ, ಕೃಷಿ ಇಲಾಖೆ, ಸಂಕಲ್ಪ, ಸಖಿ, ವಾಹಿನಿ, ಸ್ನೇಹಾ, ಇಕ್ರಾ ಸಂಸ್ಥೆಗಳ ಸಹಯೋಗದಲ್ಲಿ ನಗರದ ರೋಟರಿ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಎರಡು ದಿನಗಳ 'ಸಾವಯವ ಮತ್ತು ಸಿರಿಧಾನ್ಯ ಮೇಳ'ವನ್ನು ಉದ್ಘಾಟಿಸಿ ಮಾತನಾಡಿದರು. "ಇತ್ತೀಚೆಗೆ ಚತುರ ಕೃಷಿ ಬಗ್ಗೆ ಹೆಚ್ಚು ಪ್ರಸ್ತಾಪವಾಗುತ್ತಿದೆ. ಅದನ್ನು ಹವಾಮಾನ ಆಧಾರಿತ ಚತುರ ಕೃಷಿಯನ್ನಾಗಿ ರೂಪಿಸಿ ರೈತರನ್ನು ಸಂಕಷ್ಟದಿಂದ ಪಾರು ಮಾಡಬೇಕಿದೆ" ಎಂದು ಅವರು ಅಭಿಪ್ರಾಯಪಟ್ಟರು.

ಎಪ್ಪತ್ತರ ದಶಕದ ಹಸಿರು ಕ್ರಾಂತಿಯಿಂದಾಗಿ ಮೂಲೆಗುಂಪಾಗಿದ್ದ ಸಿರಿಧಾನ್ಯಗಳು ಈಗ ಮತ್ತೆ ರೈತರ ಹೊಲಗದ್ದೆ ಪ್ರವೇಶಿಸಿವೆ. ಇವುಗಳಿಗೆ ಸೂಕ್ತ ಮಾರುಕಟ್ಟೆ ದೊರಕಿಸಿ, ರೈತರ ಆದಾಯ ಹೆಚ್ಚಿಸುವ ಪ್ರಯತ್ನವನ್ನು ಮಾಡುವ ಅಗತ್ಯವಿದೆ ಎಂದು ಡಾ. ಶರಣಪ್ಪ ಹೇಳಿದರು.

ಮುಖ್ಯ ಅತಿಥಿಯಾಗಿದ್ದ ಕೃಷಿ ವಿಜ್ಞಾನಿ ಡಾ. ಬದರಿಪ್ರಸಾದ್ ಪಿ.ಆರ್. ಮಾತನಾಡಿ, "ರೈತರ ಸೋಲು ಗೆಲುವು ಹಂಚಿಕೊಳ್ಳುವ ಉದ್ದೇಶದಿಂದ ಕೊಪ್ಪಳ ಜಿಲ್ಲೆಯಲ್ಲಿ ಮಣ್ಣಿನೊಂದಿಗೆ ಮಾತುಕತೆ ಹಾಗೂ ವಿಜಯನಗರ ಜಿಲ್ಲೆಯಲ್ಲಿ ಹಸಿರಿನೊಂದಿಗೆ ಮಾತುಕತೆ ಆರಂಭವಾದವು. ಸುಸ್ಥಿರ ಕೃಷಿ, ಮೌಲ್ಯವರ್ಧನೆ ಹಾಗೂ ಮಾರುಕಟ್ಟೆ ಬಗ್ಗೆ ಎರಡೂ ವೇದಿಕೆಗಳು ಪ್ರಯತ್ನ ನಡೆಸಿದ್ದು, ಅದರ ಮುಂದಿನ ಹಂತವಾಗಿ ಈ ಮೇಳ ಆಯೋಜಿಸಲಾಗಿದೆ" ಎಂದರು.

ಪ್ರಾಸ್ತಾವಿಕ ಮಾತನಾಡಿದ 'ಸಹಜ ಸಮೃದ್ಧ' ಬಳಗದ ನಿರ್ದೇಶಕ ಜಿ. ಕೃಷ್ಣಪ್ರಸಾದ್, ತುಂಗಭದ್ರಾ ನದಿ ನೀರು ಬಳಸಿ ಕಬ್ಬು, ಭತ್ತ ಬೆಳೆಯುವ ರೈತರು ಸಿರಿಧಾನ್ಯಗಳತ್ತ ಸಹ ಗಮನ ಹರಿಸಬೇಕು. ದೇಸಿ ದಾನ್ಯಗಳನ್ನು ಬೆಳೆಯುವ ಕೃಷಿಕರು, ವೈವಿಧ್ಯಮಯ ತಳಿಗಳನ್ನು ಸಂರಕ್ಷಿಸುವತ್ತ ಶ್ರಮಿಸಬೇಕು ಎಂದು ಕರೆ ನೀಡಿದರು.

"ದೇಶದ ಬೆನ್ನೆಲುಬು ಎಂದು ರೈತರನ್ನು ಬಣ್ಣಿಸುತ್ತಾರೆ. ಆದರೆ ಆ ಬೆನ್ನೆಲುಬು ಮುರಿಯುವ ಕೆಲಸ ನಡೆದಿದೆ" ಎಂದು ವಿಷಾದಿಸಿದ ನಂದಿಪುರ ಪುಣ್ಯಕ್ಷೇತ್ರದ ಮಹೇಶ್ವರ ಸ್ವಾಮೀಜಿ, ಸಾವಯವ ಬೇಸಾಯಕ್ಕೆ ಸಹಕಾರ ಮತ್ತು ಪ್ರೋತ್ಸಾಹ ಕೊಡದೇ ಹೋದರೆ ಮುಂದಿನ ದಿನಗಳಲ್ಲಿ ಕೃಷಿ ಕ್ಷೇತ್ರ ದುರ್ಗತಿ ಕಾಣುವುದು ನಿಶ್ಚಿತ ಎಂದರು.

ನಿರ್ಲಕ್ಷ್ಯಿತ ಆಹಾರಧಾನ್ಯಗಳ ಮಹತ್ವ ವಿವರಿಸುವ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಸಿರಿಧಾನ್ಯ ಕೃಷಿಕರಾದ ನಾಯಕರ ಹುಲಿಗೆಮ್ಮ, ಎಚ್. ಫಕೀರಮ್ಮ ಮತ್ತು ಚಾಪೆ ಹನುಮಯ್ಯ ಇವರನ್ನು ಸನ್ಮಾನಿಸಲಾಯಿತು.

ಹೊಸಪೇಟೆ ರೋಟರಿ ಕ್ಲಬ್ ಅಧ್ಯಕ್ಷೆ ವೀಣಾ ಕೊತ್ತಂಬರಿ, ಸಖಿ ಟ್ರಸ್ಟ್ ಮುಖ್ಯಸ್ಥೆ ಡಾ. ಎಂ.ಭಾಗ್ಯಲಕ್ಷ್ಮೀ ಹಾಗೂ ಉದ್ಯಮಿ ಅಶ್ವಿನ್ ಕೊತ್ತಂಬರಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಾವಯವ ಕೃಷಿಕ ಬಸಯ್ಯ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಮಲ್ಲಿಕಾರ್ಜುನ ಹೊಸಪಾಳ್ಯ ನಿರೂಪಿಸಿದರು. ಶ್ರೀನಿವಾಸ ದೇವರಮನಿ ಸ್ವಾಗತಿಸಿದರು. ಕೆ. ಶಿವಕುಮಾರ ವಂದಿಸಿದರು.

## ಪ್ಲೆಕ್ಸ್ ಬ್ಯಾನರ್ ಕಟೌಟ್‌ಗೆ ಪರವಾನಿಗೆ ಕಡ್ಡಾಯ, ಉಲ್ಲಂಘಿಸಿದರೆ ಕಾನೂನು ಕ್ರಮ

### ಅವಧಿ ನಂತರ ಅರ್ಜಿದಾರರೇ ತೆರವುಗೊಳಿಸಬೇಕು

**ಹಂಪಿ ಟೈಮ್ಸ್ ಹೊಸಪೇಟೆ**



ಪ್ಲೆಕ್ಸ್, ಬ್ಯಾನರ್ ಮತ್ತು ಬಂಟಿಂಕ್ಸ್ ಅಳವಡಿಸಲು ನಗರಸಭೆ ಕಾರ್ಯಲಯ ದಿಂದ ಸ್ಥಳಗಳನ್ನು ನಿಗಧಿಪಡಿಸಲಾಗಿದೆ. ಈ ಸ್ಥಳಗಳಲ್ಲಿ ಮಾತ್ರಪ್ಲೆಕ್ಸ್, ಬ್ಯಾನರ್, ಬಂಟಿಂಕ್ಸಗಳನ್ನು ಅಳವಡಿಸಲು ಅವಕಾಶಕಲ್ಪಿಸಲಾಗಿದೆ.

ಹಾಗಾಗಿ ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ನಿರಪೇಕ್ಷಣಾ ಪತ್ರ ಪಡೆದು ನಂತರ ಆಧಾರ್‌ಕಾರ್ಡ್ ಪ್ರತಿಯೊಂದಿಗೆ ಅರ್ಜಿಸಲ್ಲಿಸಿ ನಿಗದಿತ ಶಲ್ಕಪಾವತಿಸಿ ಪರವಾನಿಗೆ ಪಡೆದು ಸಾರ್ವಜನಿಕರಿಗೆ ಹಾಗೂ ರಸ್ತೆ ಸಂಚಾರಕ್ಕೆ ತೊಂದರೆಯಾಗದಂತೆ ಬಟ್ಟೆಯಿಂದ ತಯಾರಿಸಿದ ಬ್ಯಾನರ್, ಕಟೌಟ್ಸ್, ಪ್ಲೆಕ್ಸ್ ಮತ್ತು ಬಂಟಿಂಕ್ಸ್‌ಗಳನ್ನು ಮಾತ್ರ ಅಳವಡಿಸಬೇಕು. ಪರವಾನಿಗೆ ಪಡಿಯದೇ ಅನಧೀಕೃತವಾಗಿ ಅಳವಡಿಸಿದಲ್ಲಿ ಅಂತವರ ವಿರುದ್ಧ ಕಾನೂನುರಿತ್ಯ ಕ್ರಮ ಜರುಗಿಸಲಾಗುವುದು ಮತ್ತು ಪರವಾನಿಗೆ ಪಡೆದ ಪ್ಲೆಕ್ಸ್, ಕಟೌಟ್, ಬ್ಯಾನರ್ ಮತ್ತು ಬಂಟಿಂಗ್ಸಗಳನ್ನು ಅವಧಿ ಮುಕ್ತಾಯವಾದ ನಂತರವೇ ಅರ್ಜಿದಾರರೇ ತೆರವುಗೊಳಿಸಬೇಕು ಎಂದು ನಗರಸಭೆ ಪ್ರಕಟಣೆಯಲ್ಲಿ ತಿಳಿಸಿದೆ.

## ವಿದ್ಯಾರ್ಥಿಗಳಿಂದ ಜಯ ಶ್ರೀರಾಮ ಭಕ್ತಿಸೇವೆ



**ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ಪಟ್ಟಣದಲ್ಲಿ ಶನಿವಾರ ಪ್ರಿಯದರ್ಶಿನಿ ಬಾಲಕಿಯರ ಪ್ರೌಢಶಾಲೆಯಲ್ಲಿ ವಾರದ ಡ್ರಿಲ್(ಕವಾಯತು)ನಲ್ಲಿ ವಿದ್ಯಾರ್ಥಿಗಳ ಮೂಲಕ ಶ್ರೀರಾಮ ನಾಮ ರಾರಾಜಿಸಿದೆ. ಡ್ರಿಲ್ ವೇಳೆ ವಿಧ್ಯಾರ್ಥಿಗಳು ಹಿಂದಿ ಬರಹದಲ್ಲಿ ಶ್ರೀರಾಮ ಎಂಬ ಮಾದರಿಯಲ್ಲಿ ಕುಳಿತು ಗಮನ ಸೆಳೆದು ಭಕ್ತಿ ಸಲ್ಲಿಸಿದರು.**







ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

# ಲಕ್ಷದ್ವೀಪಕ್ಕೆ ಶುಕ್ರದೆಸೆ ಮಾಲ್ಡೀವ್ಸ್‌ಗೆ ಆಘಾತ

ಕೆಲವೇ ಫೋಟೋಗಳು ಮತ್ತು ವಿಡಿಯೋಗಳು ಇಷ್ಟೊಂದು ಸಂಚಲನ ಮಾಡುತ್ತದೆ ಎಂದು ಮಾಲ್ಡೀವ್ ಎಣಿಸಿರಲಿಲ್ಲ. ಅಷ್ಟರ ಮಟ್ಟಿಗೆ ಫೋಟೋ ಮತ್ತು ವಿಡಿಯೋ ಆ ದೇಶದ ಮೇಲೆ ಪ್ರಭಾವ ಬೀರಿದೆ. ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಇತ್ತೀಚೆಗೆ ಲಕ್ಷದ್ವೀಪಕ್ಕೆ ಭೇಟಿ ನೀಡಿದ್ದರು. ಸ್ವಲ್ಪ ಸಮಯದ ಕಾಲ ರಿಲಾಕ್ಸ್ ಮೂಡಿನಲ್ಲಿದ್ದರು. ಆಗ ಸಮುದ್ರ ತೀರದಲ್ಲಿ ಮೋದಿ ಅವರು ಫೋಟೋಗಳನ್ನು ತೆಗೆಸಿಕೊಂಡರು ಮತ್ತು ವಿಡಿಯೋಗಳನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಲಾಯಿತು. ಸಾಮಾನ್ಯವಾಗಿ ಮೋದಿ ಎಲ್ಲೇ ಹೋದರೂ ಅವರ ವಿಡಿಯೋ ಮತ್ತು ಫೋಟೋಗಳನ್ನು ಅವರ ತಂಡ ಜಾಲತಾಣದಲ್ಲಿ ಅಪ್‌ಲೋಡ್ ಮಾಡುತ್ತದೆ. ಆದರೆ, ಲಕ್ಷದ್ವೀಪದಲ್ಲಿ ತೆಗೆಸಿಕೊಂಡ ಫೋಟೋಗಳು ಭಾರಿ ಜನಮೆಚ್ಚುಗೆ ಗಳಿಸಿದವು. ಮುದ್ರಣ ಮಾಧ್ಯಮದಲ್ಲಿ ಹಲವಡೆ ಮುಖಪುಟದಲ್ಲೂ ಬಂದವು. ಫೋಟೋಗಳನ್ನು ಅಪ್‌ಲೋಡ್ ಮಾಡಿದ ಬಳಿಕ ಲಕ್ಷದ್ವೀಪದ ಪ್ರವಾಸಿ ತಾಣಗಳ ಕುರಿತು ಭಾರಿ ಚರ್ಚೆಯಾಗುತ್ತಿದೆ. ಇಂಥ ಸ್ವರ್ಗ ನಮ್ಮ ಪಕ್ಕದಲ್ಲೇ ಇವೆ ಎಂದು ಕೆಲವರು ಹೆಮ್ಮೆ ಪಟ್ಟರು. ಆದರೆ, ಮಾಲ್ಡೀವ್ ಸರ್ಕಾರ ಇದನ್ನು ಸಹಿಸಲಿಲ್ಲ. ಬದಲಿಗೆ ಸುಮ್ಮನಿದ್ದರೂ ಸಾಕಾಗಿತ್ತು. ಆದರೆ, ಅಲ್ಲಿನ ಸಚಿವರು ಹಾಗೆ ಮಾಡಲಿಲ್ಲ. ಬದಲಿಗೆ ಭಾರತ, ಮೋದಿ ಮತ್ತು ಲಕ್ಷದ್ವೀಪದ ಕುರಿತು ಅಲ್ಲಿನ ಸಚಿವರು ಅವಹೇಳನ ಮಾಡಿದರು ಮತ್ತು ಇದನ್ನು ಜಗತ್ತಿಗೇ ಸಾರಿದರು. ಇದೇ ಮಾಲ್ಡೀವ್ಸ್‌ಗೆ ಮುಳುವಾಯಿತು. ಇತ್ತ ಪ್ರಧಾನಿ ಮೋದಿ ಅವರು ಸಹ 'ಯಾರಾದರೂ ಸಾಹಸ ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕನಸು ಕಾಣುತ್ತಿದ್ದೀರೋ, ನಿಮ್ಮ ಪಟ್ಟಿಯಲ್ಲಿ ಮೊದಲು ಲಕ್ಷದ್ವೀಪ ಕೂಡ ಇರಲಿ' ಎಂದು ಬೇರೆ ಹೇಳಿದ್ದರು. ತಮ್ಮ ದೇಶದ ಪ್ರವಾಸೋದ್ಯಮಕ್ಕೆ ಧಕ್ಕೆಯಾಗುತ್ತದೆ ಎಂದು ನಂಬಿದ ಮಾಲ್ಡೀವ್ಸ್‌ನ ಕೆಲ ಸಚಿವರು ಅಪಹಾಸ್ಯದ, ಅಗೌರವದ ಹೇಳಿಕೆ ನೀಡಿ, ಜಗತ್ತಿನ ಮುಂದೆ ಚಿಕ್ಕವರಾದರು. ಮಾಲ್ಡೀವ್ಸ್‌ನ ಈ ಅತಿರೇಕದ ವರ್ತನೆಯಿಂದ ಮಾಲ್ಡೀವ್ಸ್ ಪ್ರವಾಸ ಕೈಗೊಂಡಿದ್ದ ಹಲವರು ತಮ್ಮ ಪ್ರವಾಸವನ್ನು ರದ್ದುಗೊಳಿಸಿದರು. ಬದಲಿಗೆ ಲಕ್ಷದ್ವೀಪದತ್ತ ತಮ್ಮ ಪ್ರಯಾಣ ಬೆಳೆಸಿದ್ದಾರೆ. ಈಗಿನ ಸಮೀಕ್ಷೆ ಪ್ರಕಾರ ಲಕ್ಷದ್ವೀಪಕ್ಕೆ ಹೆಚ್ಚೂ ಕಡಿಮೆ ಮಾರ್ಚ್‌ವರೆಗೆ ಎಲ್ಲ ವಿಮಾನಗಳು ಫುಲ್ ರಷ್ ಆಗಿವೆ. ಮೇಲಾಗಿ ಸರ್ಕಾರವೇ ಮುತುವರ್ಜಿ ವಹಿಸಿದ್ದು, ಅಲ್ಲೊಂದು ವಿಮಾನ ನಿಲ್ದಾಣ ನಿರ್ಮಾಣ ಮಾಡಲು ಮುಂದಾಗಿದೆ. ವಿಮಾನ ನಿಲ್ದಾಣ ನಿರ್ಮಿಸಲು ಪ್ರವಾಸಿಗರ ಅನುಕೂಲದ ಜತೆಗೆ ಭಾರತೀಯ ವಾಯುಪಡೆಯ ಯುದ್ಧವಿಮಾನಗಳನ್ನು ಅಲ್ಲಿಂದ ಹಾರಾಟ ನಡೆಸುವ ಉದ್ದೇಶ ಇದರ ಹಿಂದಿದೆ. ಲಕ್ಷದ್ವೀಪದಲ್ಲಿ ನೋಡಲೇಬೇಕಾದ ಹಲವು ತಾಣಗಳು ಇವೆ. ನೀಲಿಯಂತೆ ಕಾಣುವ ಸಮುದ್ರದಲ್ಲಿ ಬೋಟಿಂಗ್ ಇಲ್ಲಿ ಥ್ರಿಲ್ಲಿಂಗ್ ಆಗಿವೆ. ಜಗತ್ತಿನ ನಾನಾ ಪ್ರಭೇದದ ಪಕ್ಷಿಗಳು ಇಲ್ಲಿಗೆ ಬರುತ್ತವೆ. ಹಲವು ದ್ವೀಪಗಳು ಪ್ರವಾಸಿಗರನ್ನು ಮನ ಸೆಳೆಯುತ್ತಿವೆ. ಒಟ್ಟಿನಲ್ಲಿ ಮಾಲ್ಡೀವ್ಸ್‌ಗೆ ಯಾವುದರಲ್ಲೂ ಲಕ್ಷದ್ವೀಪ ಕಡಿಮೆಯಿಲ್ಲ ಎಂಬುದು ಸತ್ಯ. ಈಗಾಗಲೇ ಮಾಲ್ಡೀವ್ಸ್‌ನಲ್ಲಿ ಸಿನಿಮಾ ಶೂಟಿಂಗ್‌ಗೆ ರೆಡಿಯಾಗಿದ್ದ ಹಲವು ಸಿನಿಮಾಗಳು ಈಗ ಲಕ್ಷದ್ವೀಪಕ್ಕೆ ಶಿಫ್ಟ್ ಆಗಿವೆ. ಮೇಲಾಗಿ ಇನ್ಮುಂದೆ ಮಾಲ್ಡೀವ್ಸ್‌ನಲ್ಲಿ ಚಿತ್ರೀಕರಣ ಮಾಡಬಾರದು ಎಂದು ಕೆಲ ಚಿತ್ರಸಂಸ್ಥೆಗಳು ನಿರ್ಧರಿಸಿವೆ. ಮಾಲ್ಡೀವ್ಸ್ ತಪ್ಪ ಹೆಜ್ಜೆಯಿಂದ ಸಾಕಷ್ಟು ನಷ್ಟಕ್ಕೆ ಒಳಗಾಗಿದೆ ಮತ್ತು ತಪ್ಪಿನ ಅರಿವೂ ಆಗಿದೆ. ಆದರೆ, ಈಗ ಕಾಲ ಮಿಂಚಿದೆ. ಲಕ್ಷದ್ವೀಪಕ್ಕೆ ಶುಕ್ರದೆಸೆ ಶುರುವಾಗಿದೆ. ಭಾರತದ ಸನಿಹದಲ್ಲೇ ಇರುವ ಲಕ್ಷದ್ವೀಪ ಪ್ರವಾಸಕ್ಕೆ ಹೇಳಿಮಾಡಿದಂತ ಪ್ರದೇಶ. ಒಮ್ಮೆ ನೋಡಿಕೊಂಡು ಬನ್ನಿ

## ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ-ಮೇಲ್:hampitimes@gmail.com

M: 9448633038

# ತಪ್ಪು ಮಾಡಲು ಬಿಡಿ..!

## ತಪ್ಪಾಗುವುದು ಕಲಿಕೆಯ ಪ್ರಯತ್ನದ ಕುರುಹೂ

ಒಂದು ವಿಚಾರ ನಿಮ್ಮೊಂದಿಗೆ ಹಂಚಿಕೊಳ್ಳಲೇ ಬೇಕು, ನಮ್ಮ ಪ್ರಾಥಮಿಕ ಶಾಲೆಯಲ್ಲಿ ಇದ್ದ ಮಲ್ಲಪ್ಪ ಮೇಷ್ಟ್ರು ಯಾವಾಗಲು ಒಂದು ಮಾತು ಹೇಳುತಿದ್ದರು, "ತಪ್ಪಾಗುತ್ತದೆ ಅಂತ ಬರೆಯೋದನ್ನೇ ಬಿಟ್ಟರೆ ಹ್ಯಾಂಗ್ಲೆ ಕಲೀತಿ ನೀನು?" ತಪ್ಪು ಆಗಬೇಕು ನೋಡು, ಆಗಲೆ ಏನಾದರೂ ಮಾಡ್ಲಿಕ್ಕೆ ಸಾಧ್ಯ ಎನ್ನುತ್ತಿದ್ದರು. ನಾವು ಇಂದು ಉಪಯೋಗಿಸುತ್ತಿರುವ ಹತ್ತಾರು ದೈನಂದಿನ ಅನ್ವಯಿಕ ಉಪಕರಣಗಳನ್ನು ಕಂಡುಹಿಡಿದಿದ್ದ ಮಹಾವಿಜ್ಞಾನಿಯೊಬ್ಬರು ಹೇಳಿದ್ದರಂತೆ "ನಾನು ಕಂಡುಹಿಡಿಯುವ ಹಂತದಲ್ಲಿ ಅನೇಕ ಬಾರಿ ಸೋತಿದ್ದರೂ ಅವು ನನ್ನ ಸೋಲಲ್ಲ, ಬದಲಿಗೆ ನಾನು ಕಂಡುಹಿಡಿಯ ಹೊರಟಿದ್ದ ಉಪಕರಣವನ್ನು ಆ ಎಲ್ಲಾ ಮಾರ್ಗಗಳಿಂದ ಕಂಡುಹಿಡಿಯಲು ಸಾಧ್ಯವಿಲ್ಲ ಎನ್ನುವ ಸತ್ಯವನ್ನು ಕಂಡುಕೊಂಡಾಂತಾಯಿತು"! ಆಶ್ಚರ್ಯವಾದರೂ ಎಂತಹ ಸತ್ಯವಾದ ಮಾತು, ಎಂತಹ ಅದ್ಬುತ ಆಶವಾದ! ಮೆಚ್ಚಲೇಬೇಕಲ್ಲವೆ ಇಂತಹ ಮಹನೀಯರನ್ನ ಅವರ ಪ್ರಯತ್ನದ ಪರಿಕಲ್ಪನೆಯನ್ನು, ಸಾಧಿಸಬೇಕೆನ್ನುವ ಅವರ ತಪಸ್ಸುನ್ನು, ಸಿದ್ದಿಸಿಕೊಳ್ಳುತ್ತೇನೆ ಎನ್ನುವ ಅಚಲವಾದ ನಂಬಿಕೆಯನ್ನು.

ನಾವು ಮಾಡುವಂತಹ ಪ್ರಯತ್ನದಲ್ಲಿನ ಕೆಲ ಹಿನ್ನೆಡೆಗಳನ್ನು ಕಂಡು ಸಾಕಿನ್ನು ಇದು ನನ್ನಿಂದಾಗದು ಎನ್ನುವ ಮೂಲಕ ಸಾಧಿಸಹೊರಟಿದ್ದ ವಿಚಾರವೊಂದಕ್ಕೆ ಉಪಸಂಹಾರ ಹಾಕುವ ಬದಲು, ಸಾಧನೆಯಲ್ಲಿನ ಅಡೆತಡೆಗಳನ್ನು ಒಂದೊಂದಾಗಿ ಉಪಶಮನಗೊಳಿಸಿಕೊಳ್ಳುತ್ತ ಮುಂದೆ ಸಾಗಿದರೆ ಯಶಸ್ಸು ಕಟ್ಟಿಟ್ಟ ಬುತ್ತಿ ಎನ್ನುವುದರಲ್ಲಿ ಎರಡು ಮಾತಿಲ್ಲ.

ಸರಿ, ಹಾಗಾದರೆ ಜಾಗತಿಕ ಮಟ್ಟದಲ್ಲಿ ನಾವು ಇಂದು ಕೇಳುತ್ತಿರುವ ಕೆಲವು ಪುನರಪಿ ಪದಗಳೆಂದರೆ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ಹಾಗೆಯೆ ಪ್ರತಿಭಾ ಪಲಾಯನ ಏನಿದರ ಅರ್ಥ? ಇದರ ಅರ್ಥ ಇಷ್ಟೇ, ನಿನ್ನಲ್ಲಿ ನನಗೆ ಬೇಕಾಗಿದ್ದು ಇದ್ದರೆ ಮನ್ನಣೆ ಇಲ್ಲದಿದ್ದರೆ ದೇವರಾಣೆ ನಡೆ ಆಚೆಗೆ ಎನ್ನುವುದೇ ಆಗಿದೆ.

ಹೌದು ಪ್ರತಿಯೊಬ್ಬರೂ ಪ್ರತಿಭೆಯ ಹಿಂದೆ ಬಿದ್ದು, ತಮ್ಮ ತಮ್ಮ ಕೆಲಸಗಳನ್ನು ಸರಳ ಮತ್ತು ಸರಾಗವಾಗಿಸಲು ಹಂಬಲಿಸುತಿದ್ದಾರೆಯೆ ಹೊರತು, ಇತರರ ಕಷ್ಟಗಳಿಗೆ ಸ್ಪಂದನೆಯಾಗಲಿ, ಅವರ ನೋವು-ನಲಿವುಗಳಿಗೆ ಆಸರೆಯಾಗಲಿ, ಸಹಾಯ ಹಸ್ತವನ್ನು ಚಾಚವುದಾಗಲಿ, ಖಂಡಿತಾ ಕಾಣಲಾಗುವುದಿಲ್ಲ,

ಹಾಗಾಗಿ ಪಾಲಕರಾದ ನಾವು-ನೀವುಗಳು ಏನು ಮಾಡಬಹುದು? ಒಮ್ಮೆ ಸರಿಯಾಗಿ ಯೋಚಿಸಿ, ಇಂದಿನ ಕಾಲಕ್ಕೆ ತಕ್ಕಂತೆ, ನಮ್ಮ ಮಕ್ಕಳನ್ನು ಸಿದ್ದಪಡಿಸುವುದಲ್ಲದೆ, ನಾವು ಬೆಳೆದು ಬಂದ ವಾತಾವರಣವೆ ಚನ್ನಾಗಿತ್ತು ಎಂದು ಪ್ರಸ್ತುತ ಮಕ್ಕಳನ್ನು ತೆಗಳುತ್ತಾ ಕೂರುವ ಕಾಲ ಇದಲ್ಲ, ಪಾಲಕರೆ ನಮಗೆ ನಮ್ಮ ಮಕ್ಕಳು ಬೆಳೆಯಬೇಕು, ಅವರು ಚನ್ನಾಗಿ ಬಾಳಬೇಕು, ಜೊತೆಗೆ ತನ್ನವರಿಗೂ ನಾಡಿಗೂ ಬೆಳಕಾಗಬೇಕು ಅಲ್ಲವೆ?.



ಮತ್ತೇಕೆ ತಡ ಪಾಲಕರಾದ ನಾವು ನಮ್ಮ ಅಭಿರುಚಿಯ ಜೊತೆ ಜೊತೆಗೆ, ನಮ್ಮ ಮಕ್ಕಳ ಆಸಕ್ತಿಗಳನ್ನು ಹಾಗು ಸದ್ಯದ ಅವಶ್ಯಕತೆಗಳನ್ನು ಮನಗಂಡು, ನಮ್ಮ ಮಕ್ಕಳನ್ನು ಆ ನಿಟ್ಟಿನಲ್ಲಿ ಬೆಳೆಯಲು ಪ್ರೋತ್ಸಾಹ ನೀಡಬೇಕಾಗಿದೆ. ನಮ್ಮದೇನಿದ್ದರು, ನಮ್ಮ ಮಕ್ಕಳ ಆಸೆ-ಅಭಿರುಚಿಗಳನ್ನು ಮನದಲ್ಲಿಟ್ಟುಕೊಂಡು ಅವರ ತಮ್ಮಷ್ಟಕ್ಕೆ ತಾವೇ ಬೆಳಗುವಂತೆ ನೋಡಿಕೊಳ್ಳುವುದೇ ಆಗಿದೆ.

ಹಾಗಂತ ಸದಾ ಅವರ ಬೆನ್ನಹಿಂದೆ ಬಿದ್ದು ಅವರ ಹೆಜ್ಜೆ-ಹೆಜ್ಜೆಗಳನ್ನೂ ನೀವೆ ನಿಮ್ಮ ಕೈಯಿಂದ ನೇರವಾಗಿ ಮುನ್ನೆಡೆಸುವುದಲ್ಲ! ಕೇವಲ ನಮ್ಮ ಮಕ್ಕಳ ಮುಂದೆ ಅಪರಿಮಿತವಾದ ಅವಕಾಶಗಳನ್ನು ತೆರೆದಿಡುವುದು, ಆಯ್ಕೆಯನ್ನು ಅವರಿಗೆ ಬಿಟ್ಟು ಕೊಡುವುದು, ತಪ್ಪಾಗುವ ಸಂದರ್ಭದಲ್ಲಿ ತಿದ್ದುವುದು, ಇಷ್ಟೇ ಮಾಡಿದರೆ ಸಾಕು, ಮಕ್ಕಳು ಅವರ ಇಚ್ಚೆಯಂತೆ ಅವರ ಆಯ್ಕೆಯನ್ನು ಅವರೇ ಪುರಸ್ಕರಿಸಿ, ಪೋಷಿಸಿ, ಪೂರ್ಣಗೊಳಿಸುತ್ತಾರೆ.



**ಜಿ. ಶಿವಕುಮಾರ್ ಸೋಗಿ,**
**ಕಾರವಾರ, ಕೈಗಾ.**
9008130204

ಅದಕ್ಕಾಗಿ ಪಾಲಕರಾದ ನಾವುಗಳು ಕೆಲ ಸೂಕ್ಷ್ಮಗಳನ್ನು ಅರಿತುಕೊಳ್ಳುವುದು ಉತ್ತಮ....

1 ಮೊದಲು ನಮ್ಮ ಮಕ್ಕಳನ್ನು ನಾವು ಸರಿಯಾಗಿ ತಿಳಿದುಕೊಳ್ಳೋಣ - ಅವರ ಆಸೆ ಅಭಿರುಚಿಗಳನ್ನು ಸಣ್ಣ ಹಂತದಲ್ಲೇ ಗುರುತಿಸಿ ಅವುಗಳನ್ನು ಪುರಸ್ಕರಿಸಿ, ಆ ನಿಟ್ಟಿನಲ್ಲಿ ಅವರನ್ನು ಪ್ರೇರೇಪಿಸಿ ಅವರಿಗೆ ಪ್ರೋತ್ಸಾಹ ನೀಡೋಣ.

2 ಹಾಸಿಗೆ ಇದ್ದಷ್ಟೇ ಕಾಲು ಚಾಚು- ಪ್ರತಿಯೊಬ್ಬರ ಜೀವನದಲ್ಲೂ ಸ್ಪರ್ಧೆ ಇದೆ ಮತ್ತು ಅದು ಬದಕಲು ಮುಖ್ಯಕೂಡ. ಹಾಗಂತ ಅಳೆತೆ ಮೀರಿ ಕೈಚಾಚುವುದು ಸರಿಯಲ್ಲ, ಕೊನೆಯ ಪಕ್ಷ ನಿನ್ನ ಕೈಯಲ್ಲಿರುವುದನ್ನಾದರೂ ಉಳಿಸಿಕೊಳ್ಳಬೇಕಲ್ಲ! ಹಾಗಾಗಿ ನಿಮ್ಮ ಮಕ್ಕಳ ಶಕ್ತಿ-ಸಾಮರ್ತ್ಯದ ಅರಿವು ನಿಮಗಿರಲಿ.

3 ನೆಡೆಯುವವನು ಮಾತ್ರ ಬೀಳಲು ಸಾದ್ಯ-ಹಾಗಂತ ನೆಡೆಯುವುದನ್ನೆ ಬೇಡ ಎನ್ನಲಾದೀತೆ? ನೀವು ಮಾಡುವ ಪ್ರಯತ್ನದಲ್ಲಿ ಸೋಲು ಕಟ್ಟಿಟ್ಟ ಬುತ್ತಿ ಅದನ್ನು ಜಯವಾಗಿಸಿಕೊಳ್ಳಲು ಮಾತ್ರ ನಿನ್ನ ಪ್ರಯತ್ನ , ಹಾಗಾಗಿ ನಿಮ್ಮ ಪ್ರಯತ್ನದಲ್ಲಿನ ಸೋಲನ್ನು ಸವಾಲಾಗಿ ಎದುರುಸುವ ಛಾತಿಯನ್ನು ಬೆಳೆಸಿಕೊಳ್ಳವುದನ್ನೂ ನಿಮ್ಮ ಮಕ್ಕಳಿಗೆ ಕಲಿಸಿಕೊಡಿ.

4 ತಪ್ಪಾಗುವುದು ಕಲಿಕೆಯ ಪ್ರಯತ್ನದ ಕುರುಹೂ, ತಪ್ಪಾಗಲಿ ಬಿಡು, ಈ ನಿಮ್ಮ ತಪ್ಪು ಇನ್ನೊಂದು ಹೊಸ ವಿದಾನದ ಹುಟ್ಟಿಗೆ ಕಾರಣವಾಗುತಿದೆಯಲ್ಲ ಅದನ್ನು ಅನುಭವಿಸು ಮತ್ತೆ ಪ್ರಯತ್ನಿಸು - ತಪ್ಪಾಗುವುದು ಸಹಜ, ಇಲ್ಲಿ ತಿದ್ದಿಕೊಳ್ಳುವುದೇ ಮುಖ್ಯ ಹಾಗೆ ತಿದ್ದಿಕೊಂಡವರೇ ಇಂದು ಜಗತ್ತಿನ ಮುಂಚೂಣಿ ನಾಯಕರು, ನಿಪುಣರು,ಮೇಧಾವಿ ಗಳು ಹಾಗು ಯಶಸ್ವಿ ವ್ಯಕ್ತಿಗಳಾಗಿದ್ದಾರೆ.

5 ಮಕ್ಕಳಲ್ಲಿನ ಅಂತಃ ಕರುಣೆಯನ್ನ ಜಾಗ್ರತಗೊಳಿಸಿ, ನಿಮ್ಮ ಸೋಲು-ಗೆಲುವುಗಳನ್ನು ಅವರೊಂದಿಗೆ ಹಂಚಿಕೊಳ್ಳಿ , ನಿಮ್ಮ ಮಕ್ಕಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ, ನಿಮ್ಮ ಯಶಸ್ಸನ್ನು ಹೇಳಿಕೊಳ್ಳುತ್ತಿರೂ ಇಲ್ಲವೆ ಗೊತ್ತಿಲ್ಲ, ಆದರೆ ನಿಮ್ಮ ಸೋಲನ್ನು ಅವರೊಂದಿಗೆ ಹಂಚಿಕೊಳ್ಳಿ, ವಸ್ತು ಸ್ಥಿತಿಯ ಅರಿವು ಉಂಟಾಗಲು ಅನುವು ಮಾಡಿಕೊಡಿ. ನಿಮ್ಮ ಮಕ್ಕಳ ಯೋಚನೆಯಲ್ಲಿನ ಧನಾತ್ಮಕ ಬೆಳವಣಿಗೆಯನ್ನು ಗಮನಿಸಿ.

6 ಪಾಲಕರಾದ ನಾವು ನಮ್ಮ ಮಕ್ಕಳನ್ನು ನಾವು ಅಂದುಕೊಂಡಂತೆ, ನಮಗೆ ಸರಿ ಎನಿಸಿದಂತೆ ಮತ್ತು ನಮ್ಮ ತಲೆಯಲ್ಲಿನ ಸೋಲು ಸವಾಲುಗಳಿಗೆ ಅಥವಾ ನಮ್ಮ ಜೀವನದಲ್ಲಿನ ಸೋಲುಗಳಿಗೆ ಸರಿಹೊಂದುವಂತೆ ಬೆಳೆಸುವ ಪ್ರಯತ್ನ ಮಾಡುತ್ತೇವೆ ಹೊರತು ಅವರ ಇಚ್ಚೆಯಂತಲ್ಲ ಅವನ ಆಸೆ ಆಕಾಂಕ್ಷೆ ಅವನ ಜೀವನ ಅವನ ಅಗತ್ಯತೆಗಳಿಗಲ್ಲ. ಏಕೆಂದರೆ ಅದು ನೀವು ನೋಡಿದ ಪ್ರಪಂಚ, ಅವನ ಕಣ್ಣುಗಳಿಂದ ನೀವು ಜಗತ್ತನ್ನು ನೋಡಿ, ನಿಮ್ಮ ಕಣ್ಣುಗಳಿಂದ ಅವನ ಜಗತ್ತನ್ನು ತೋರಿಸಿವುದು ಬೇಡ. ಇದೇ ಸತ್ಯ ಮತ್ತು ಇದುವೇ ಕೊನೆಯಲ್ಲಿ ಉಳಿಯುವುದು ಕೂಡ.

**ನೆನಪಿರಲಿ.....**

ನಮ್ಮ ಮಕ್ಕಳು ನಮ್ಮಂತೆಯೇ ಆಗಬೇಕೆಂದೇನು ಇಲ್ಲ. ಸದಾ ನಿಮ್ಮ ಮಕ್ಕಳೊಂದಿಗೆ ಇದ್ದುಕೊಂಡೆ ಅವರನ್ನು ಸರಿದಾರಿಯಲ್ಲಿ ನೆಡೆಸುವುದು ಕಡುಮೂರ್ಖತನ! ನಿಮ್ಮ ಮಕ್ಕಳು ನಿಮ್ಮ ಕೈಗನ್ನಡಿಯಿದ್ದಂತೆ ಅವರಲ್ಲಿ ನಿಮ್ಮನ್ನು ನೀವು ಕಂಡುಕೊಳ್ಳುಲು ಪ್ರಯತ್ನಿಸಿ ತಪ್ಪೇನಿಲ್ಲ, ಆದರೆ ಅವರನ್ನು ನಿಮ್ಮಂತೆಯೇ ಮಾಡಲು ಹೊರಡುವುದು ಬಾಲಿಷತನವಲ್ಲದೆ ಮತ್ತೇನು?

ನೀವಿಲ್ಲದಿದ್ದರೂ ನಿಮ್ಮ ಮಕ್ಕಳು ಸರಿಯಾದ ದಾರಿಯಲ್ಲಿ ನೆಡೆಯಬಲ್ಲರೆಂಬ ವಿಶ್ವಾಸವನ್ನ ನೀವು ನಿಮ್ಮ ಮಕ್ಕಳಲ್ಲಿ ತಂದಿದ್ದೇ ಆದರೆ, ಪಾಲಕರಾಗಿ ನೀವು ಗೆದ್ದಂತೆಯೇ. ಆ ಗೆಲುವಿಗೆ ಪ್ರತಿಯೊಬ್ಬ ಪಾಲಕನೂ ಅರ್ಹನೆಂಬುದನ್ನು ಖಾತ್ರಿಪಡಿಸುವುದೇ ಈ "ಓ ಮಯ್ ಡಿಯರ್..... ಅಪ್ಪ ಅಮ್ಮ, ನನ್ನ ಮಾತು ಕೇಳಿ ಸ್ವಲ್ಪ" ಎನ್ನುವ ಸರಣೀ ಅಂಕಣ ಬರಹಗಳ ಪ್ರಯತ್ನ.



# ಚಾರ್ವಿಗೆ ವಿಶ್ವ ಚೆಸ್ ಚಾಂಪಿಯನ್ ಗರಿ, ರಾಷ್ಟ್ರೀಯ ಬಾಲ ಪುರಸ್ಕಾರ

■ **ಹಂಪಿ ಟೈಮ್ಸ್ ಹೊಸಪೇಟೆ:**

ಹಾಸನ ಮೂಲದ ಕು. ಚಾರ್ವಿ ಎ. ಅವರು 8 ವರ್ಷದೊಳಗಿನವರ ವಿಶ್ವ ಚೆಸ್ ಚಾಂಪಿಯನ್ ಶಿಪ್ ಸ್ಪರ್ಧೆಯಲ್ಲಿ ವಿಜಯಶಾಲಿಯಾಗಿ "ವಿಶ್ವ ಚೆಸ್ ಚಾಂಪಿಯನ್" ಪದಕ ತನ್ನದಾಗಿಸಿಕೊಂಡಿದ್ದಾರೆ.



ಅವರು ಜಾರ್ಜಿಯಾದ ಬಟುಮಿಯಲ್ಲಿ ನಡೆದ ಪ್ರತಿಷ್ಠಿತ "2022 ಚಾಂಪಿಯನ್ ಶಿಪ್" ನಲ್ಲಿ ಮೊದಲ ಸ್ಥಾನದಲ್ಲಿ ಗೆದ್ದು ಜಾಗತಿಕ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ.

ಈ ಹಿಂದೆ, ಶ್ರೀಲಂಕಾದಲ್ಲಿ ನಡೆದ 2022 ರ ಚಾಂಪಿಯನ್ಶಿಪ್ನಲ್ಲಿ ಅಂಡರ್-8 ಕಾಮನ್ವೆಲ್ತ್ ಚೆಸ್ ಚಾಂಪಿಯನ್ ಪ್ರಶಸ್ತಿಯನ್ನು ಸಹ ಪಡೆದುಕೊಂಡಿದ್ದಾರೆ.2022ರಲ್ಲಿ ಇಂಡೋನೇಷ್ಯಾದ ಬಾಲಿಯಲ್ಲಿ ನಡೆದ ಏಷ್ಯನ್ ಯೂತ್ ಚೆಸ್ ಚಾಂಪಿಯನ್ಶಿಪ್ನಲ್ಲಿ ಐದು ಚಿನ್ನದ ಪದಕಗಳನ್ನು ಮತ್ತು ಒಂದು ಬೆಳ್ಳಿಯನ್ನು ಗೆದ್ದಿದ್ದಾರೆ.

2021 ಮತ್ತು 2022 ರಲ್ಲಿ ನಡೆದ ವಿವಿಧ ಚಾಂಪಿಯನ್ಶಿಪ್ಗಳಲ್ಲಿನ ಅಂಡರ್-7, ಅಂಡರ್-8, ಮತ್ತು ಅಂಡರ್-10 ರಾಷ್ಟ್ರೀಯ ಚೆಸ್ ಚಾಂಪಿಯನ್ ಆಗಿ ಅವರು ಹೊರಹೊಮ್ಮಿದ್ದಲ್ಲದೆ, ಹಲವಾರು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಳ್ಳುವ ಮೂಲಕ ರಾಷ್ಟ್ರೀಯ ಮಟ್ಟದಲ್ಲಿಯೂ ತಮ್ಮ ಪ್ರಾಬಲ್ಯವನ್ನು ಸಣ್ಣ ಪ್ರಾಯದಲ್ಲೇ ಸಾಬೀತುಪಡಿಸಿದ್ದಾರೆ.

ಪ್ರಸ್ತುತ ಒಟ್ಟು ನಾಲ್ಕು ಅಂತರಾಷ್ಟ್ರೀಯ ಪ್ರಶಸ್ತಿಗಳನ್ನು ಮತ್ತು ಮೂರು ರಾಷ್ಟ್ರೀಯ ಪ್ರಶಸ್ತಿಗಳನ್ನು ಹೊಂದಿದ್ದಾರೆ, ಇದು ಗಮನಾರ್ಹ ಸಾಧನೆಯಾಗಿದೆ. 2022 ರಲ್ಲಿ, ಬಾಲಕಿ ಆರು ಪ್ರಶಸ್ತಿಗಳನ್ನು ಗಳಿಸಿದ್ದಲ್ಲದೆ, ಕ್ರೀಡಾ ಜಗತ್ತಿನಲ್ಲಿ ದಾಖಲೆ ಬರೆದಿದ್ದಾರೆ. ಪ್ರಸ್ತುತ ಅಂಡರ್-8 ಮತ್ತು ಅಂಡರ್-10 ನ ಬಾಲಕಿಯರ ವಿಭಾಗದಲ್ಲಿ ಭಾರತದ ನಂ. 1 ಶ್ರೇಯಾಂಕದ ಚೆಸ್ ಆಟಗಾರ್ತಿಯಾಗಿದ್ದಾರೆ. ಬಾಲಕಿಗೆ ರಾಷ್ಟ್ರೀಯ ಬಾಲ ಪುರಸ್ಕಾರ ಘೋಷಣೆಯಾಗಿದೆ.

# ಬೆಂಗಳೂರಿನಲ್ಲಿ ಕಲಾವಿದರಿಗೆ ವ್ಯಂಗ್ಯಚಿತ್ರ ಪ್ರದರ್ಶನ, ಕಾರ್ಯಾಗಾರ

■ **ಹಂಪಿ ಟೈಮ್ಸ್ ಹೊಸಪೇಟೆ**

ಮುಂಬರುವ ಲೋಕಸಭೆ ಚುನಾವಣೆ-2024 ರ ಹಿನ್ನೆಲೆಯಲ್ಲಿ ಮತದಾರರಲ್ಲಿ ಮತದಾನದ ಕುರಿತು ಜಾಗೃತಿ ಮೂಡಿಸಲು ಕರ್ನಾಟಕ ಮುಖ್ಯ ಚುನಾವಣಾಧಿಕಾರಿಗಳ ಕಚೇರಿವತಿಯಿಂದ ಜನವರಿ 21 ರಂದು ಬೆಳಗ್ಗೆ 9 ಗಂಟೆಯಿಂದ ಕಲಾವಿದರಿಗಾಗಿ 'ವ್ಯಂಗ್ಯಚಿತ್ರ ಪ್ರದರ್ಶನ ಮತ್ತು ಕಾರ್ಯಾಗಾರ'ವನ್ನು ವಿಧಾನಸೌಧ ಪೂರ್ವದಿಕ್ಕಿನ ಬಸವಣ್ಣನ ಪ್ರತಿಮೆ ಎದುರುಗಡೆಯಲ್ಲಿ ಏರ್ಪಡಿಸಲಾಗಿದೆ. ವೃತ್ತಿಪರ ಮತ್ತು ಹವ್ಯಾಸಿ ವ್ಯಂಗ್ಯಚಿತ್ರಕಾರರು, ಹವ್ಯಾಸಿ ಕಲಾವಿದರು, ಕಲಾ ವಿದ್ಯಾರ್ಥಿಗಳು ಈ ಜಾಗೃತಿಅಭಿಯಾನದಲ್ಲಿ ಭಾಗವಹಿಸಬಹುದಾಗಿದೆ. ಚುನಾವಣೆ, ಮತದಾನದ ಮಹತ್ವ ಸಾರುವ, ಮತದಾನ ಪ್ರಕ್ರಿಯೆಯಲ್ಲಿ ನಾಗರಿಕರು ಭಾಗವಹಿಸುವುದನ್ನು ಪ್ರೋತ್ಸಾಹಿಸುವಂತಹ ವ್ಯಂಗ್ಯಚಿತ್ರಗಳನ್ನು ರಚಿಸಬೇಕು. ಆಯ್ಕೆಯಾದ 100 ವ್ಯಂಗ್ಯಚಿತ್ರಗಳನ್ನು ಜ.21ರಂದು ಪ್ರದರ್ಶನಕ್ಕೆಇರಿಸಲಾಗುತ್ತದೆ. ಅತ್ಯುತ್ತಮ 25 ಚಿತ್ರಗಳನ್ನು ಮತದಾನಜಾಗೃತಿ, ಪ್ರಚಾರಕ್ಕಾಗಿ ಬಳಸಿಕೊಳ್ಳಲಾಗುತ್ತದೆ ಹಾಗೂ ಆ ವ್ಯಂಗ್ಯಚಿತ್ರಗಳಿಗೆ ಗೌರವಧನವನ್ನು ಸಹ ನೀಡಲಾಗುತ್ತದೆ.

**ಷರತ್ತು ಹಾಗು ನಿಬಂಧನೆಗಳು:**

ಚಿತ್ರಗಳಲ್ಲಿ ಯಾವುದೇ ರಾಜಕೀಯ ಪಕ್ಷಗಳ ಪ್ರಚಾರ ಮತ್ತು ವ್ಯಂಗ್ಯ ಇರಬಾರದು, ಚಿತ್ರಗಳು ಹೊಸದಾಗಿದ್ದು, ಈ ಹಿಂದೆಯಾವುದೇ ಪ್ರಚಾರದಲ್ಲಿ ಬಳಸಿಕೊಂಡಿರಬಾರದು, ಚಿತ್ರಗಳು ಸ್ವಂತ ರಚನೆಯಲ್ಲಿರಬೇಕು. (ಗ್ರಾಫಿಕ್ಸ್, ಕುಂಚ, ಪೆನ್ಸಿಲ್, ಪೆನ್‌ಇತ್ಯಾದಿ) ಚಿತ್ರಗಳನ್ನು 1800x2400 ಅಳತೆಯಡಿಜಿಟಲ್ ಆವೃತ್ತಿಯಲ್ಲಿಸಲ್ಲಿಸಬೇಕು, ಆಯ್ಕೆಯಾದ ಚಿತ್ರಗಳ ಅಸಲಿಪ್ರತಿಗಳನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು. ಆಯ್ಕೆಯಾದ ಮೊದಲ 25 ಚಿತ್ರಗಳಿಗೆ ಗೌರವಧನ ನೀಡಲಾಗುವುದು, ಚಿತ್ರಗಳನ್ನು mediacellceokarnataka@gmail.com ವಿಳಾಸಕ್ಕೆ ಕಳುಹಿಸಬೇಕುಹಾಗೂ ಇಮೇಲನಲ್ಲಿತಮ್ಮಹೆಸರು, ವಿಳಾಸ ಹಾಗೂ ಮೊಬೈಲ್‌ಸಂಖ್ಯೆಯನ್ನು ತಪ್ಪದೇ ನಮೂದಿಸಿರಬೇಕು.

# ಹಂಪಿ ಪ್ರವಾಸ ಅನುಭವ

## ಅವನತಿಯಾಗುವ ಮೊದಲು ಆರೋಹಣ ಮಾಡೋಣ

**ಕಣ್ಣಿದ್ದೋರು ಕನಕಗಿರಿ ನೋಡಬೇಕು, ಕಾಲಿದ್ದೋರು ಹಂಪಿ ನೋಡಬೇಕು ಎನ್ನುವುದು ಸರ್ವಕಾಲಿಕ ಸತ್ಯ.**

ಶ್ರೀ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ವಿಜಯನಗರ ಸಾಮ್ರಾಜ್ಯವು ತನ್ನ ಉತ್ತುಂಗವನ್ನು ತಲುಪಿದಂತೂ ತಿಳಿದೆ ಇದೆ. ತಾಳಿಕೋಟ ಕದನದ ಪರಿಣಾಮ ರಕ್ತಪಾತವೇ ನಡೆದೊಯಿತು. ಡೆಕ್ಕನ್ ಸುಲ್ತಾನರು ವಿಜಯನಗರದ ರಾಜಧಾನಿ ಹಂಪೆಯಲ್ಲಿ ಮೆರೆಯುತ್ತಾ ಮೆರವಣಿಗೆ ಮಾಡಿ ಸಂಪೂರ್ಣ ನಾಶಪಡಿಸಿ, ಕಟ್ಟಡಗಳನ್ನು ಸುಟ್ಟು ಹಾಕಿ, ಸಂಪತ್ತನ್ನು ದೋಚಿತ್ತು ಎಷ್ಟಿತ್ತೇಂದರೆ ಸಿಕ್ಕ ಸಿಕ್ಕ ಪ್ರಾಣಿಗಳ ಮೇಲೆ ಸಹ ಏರಿಕೊಂಡೊದರು. ಇಲ್ಲಿನ ನಾಗರೀಕರನ್ನು ಅಮಾನವೀಯವಾಗಿ ಕೊಂದರು. ನಗರವನ್ನು ಸಂಪೂರ್ಣ ಭಗ್ನಾವಶೇಷ ಮಾಡಿ ವಿಜಯನಗರ ಸಾಮ್ರಾಜ್ಯವನ್ನೇ ಪತನವಾಗಿಸಿದರು ಎಂಬುದು ಇತಿಹಾಸ ಹೇಳುತ್ತದೆ. ವೈಭವಿಯುತವಾಗಿ ಮೆರೆದ ಮಹಾನ್ ವಿಜಯನಗರ ಸಾಮ್ರಾಜ್ಯವ ಸುಲ್ತಾನರ ದಾಳಿಯಿಂದ ಇಲ್ಲದಂತಾಗಿಸಿದರೂ ಕೂಡ ಇಂದು ಅಳಿದು ಉಳಿದಿರುವ ಅವಶೇಷಗಳು ಮತ್ತು ಸ್ಮಾರಕಗಳು ಸಂಪೂರ್ಣವಾಗಿ ಕಣ್ಮರೆಯಾಗದೇ ಉಳಿದಿವೆ ಎಂದರೇ ಅರ್ಥವಾಗುತ್ತದೆ ಎಷ್ಟೊಂದು ಅಗಾಧವಾಗಿ ವಿಸ್ತಾರದ ಸಾಮ್ರಾಜ್ಯವಿತ್ತೆಂದು.ಹಂಪಿಗೆ ವರ್ಷದಿಂದ ವರ್ಷಕ್ಕೆ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಿದೆ. ಅದರಲ್ಲೂ ನವೆಂಬರ್ ನಿಂದ ಫೆಬ್ರವರಿಯು ಪ್ರವಾಸ ಕಾಲವಾಗಿರುವುದರಿಂದ ಈ ಸಂದರ್ಭದಲ್ಲಿ ಬ್ಯಾಟರಿ ಚಾಲಿತ, ವಿದ್ಯುತ್ ಶಕ್ತಿ ಬಳಕೆಯ ವಾಹನಗಳನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಓಡಿಸಬೇಕಾಗಿದೆ. ಮತ್ತು ಸಮಯವನ್ನು ವಿಸ್ತರಿಸಬೇಕು. ಪ್ರವಾಸೋದ್ಯಮ ಇಲಾಖೆಯಿಂದ ಹೆಚ್ಚು ಪ್ರವಾಸಿ ಸ್ನೇಹಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸುವುದರ ಜೊತೆಗೆ ಹೆಚ್ಚಿನ ಜವಾಬ್ದಾರಿ ಕೂಡ ವಹಿಸಬೇಕು. ಪ್ರವಾಸೋದ್ಯಮ ಇಲಾಖೆಯಿಂದಲೇ ಕ್ಯಾಂಟೀನ್ ಮತ್ತು ಕ್ಯಾಟರಿಂಗ್ ವ್ಯವಸ್ಥೆ ಮಾಡಿದ್ದಲ್ಲಿ ಖಾಸಿಗಿಯವರ ಆವಳಿಯನ್ನು ನಿಯಂತ್ರಿಸಬಹುದು.




ಎಲ್ಲೆಂದರಲ್ಲಿ ಮಲಮೂತ್ರ ವಿಸರ್ಜನೆ ಮಾಡುವುದು, ಮಂಟಪಗಳು ಸ್ಮಾರಕಗಳ ಬಳಿ ವಿದೇಶಿಯರ ಮತ್ತು ಪ್ರವಾಸಿಗರಿಗೆ ಪಾರ್ಟಿಗಳಿಗೆ ಪೊಲೀಸರು ಅನುಮತಿ ನೀಡಬಾರದು. ಗಾಂಜಾ, ಚರಸ್ ಸೇದಿ ಅಸಭ್ಯವಾಗಿ ವರ್ತಿಸುವವರನ್ನೂ ನಿಯಂತ್ರಿಸಬೇಕು. ಭದ್ರತಾ ದೃಷ್ಟಿಯಿಂದ ಹೆಚ್ಚು ಪೊಲೀಸ್ ಅಧಿಕಾರಿಗಳನ್ನು ನಿಯೋಜಿಸಬೇಕಾಗಿದೆ. ಪ್ರವಾಸಿಗರಿಗೆ ಮೊಬೈಲ್ ಸುಲಭ ನೆಟ್ವರ್ಕ್ ಮತ್ತು ಚಾರ್ಜಿಂಗ್ ವ್ಯವಸ್ಥೆ ಕೂಡ ಅವಶ್ಯಕವಾಗಿದೆ.

ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಹಂಪೆ ಸೇರಿರುವುದು ತಾಣಗಳ ಪಟ್ಟಿಗೆ ಶ್ರೇಯಸ್ಸು. ವಜ್ರ ವೈಡೂರ್ಯಗಳನ್ನು ಸೇರು ಬಳ್ಳಗಳಲ್ಲಿ ಅಳತೆಕರಿಸಿದ ಸಾಮ್ರಾಜ್ಯದ ಕುರುಹುಗಳು ಅವನತಿಯಾಗುವ ಮೊದಲು ಆರೋಹಣ ಮಾಡೋಣ. ಈ ನಮ್ಮ ವಿಜಯನಗರ ಸಾಮ್ರಾಜ್ಯದ ಐತಿಹ್ಯಗಳನ್ನು ಮುಂದಿನ ತಲೆಮಾರಿಗೆ ಬಳುವಳಿಯ ರೂಪದಲ್ಲಿ ಕೊಡಬೇಕು ಎನ್ನುವುದೇ ನಮ್ಮ ಆಶಯ.

– **ಕೆ.ಎಂ.ಶಿವಶಂಕರಯ್ಯ,** ಹಗರಿಬೊಮ್ಮನಹಳ್ಳಿ.

## ಕವಿ ಮನಸು

### ವಿರಹದ ವಿಲಿ ವಿಲಿ



ಎದೆಯಲಿ ವಿರಹದ ವಿಲಿ ವಿಲಿ ಗಾನ
ವನದಲಿ ಪಕ್ಷಿಯ ಚಿಲಿಪಿಲಿ ಗಾನ
ಕಣ್ಣಲಿ ಕಾತುರ ಕಾಣಲು ನಿನ್ನ
ಕೇಳಿಸದೇ ಇನಿಯ ಎನ್ನೆದೆ ತನನ

ನೀ ಬರುವ ಹಾದಿಯ ಕಾಯುತಲಿರುವೆ
ಗೆಳೆಯನೇ ಹೇಳು ಎಲ್ಲಿರುವೆ
ನನ್ನಯ ನಯನದಿ ದಳ ದಳ ಹನಿಗಳು
ಮರೆಸಿವೆ ಜಲಜೆಯ ಜುಳು ಜುಳು

ಹಾದಿಯ ಹೂಗಳು ಚಂದದಿ ಅರಳಿ
ಕಾದಿವೆ ನಿನ್ನಾಗಮನಕೆ
ಅರಳಿದ ಹೂಗಳ ಕೈಯಲಿ ಕೀಳಿ
ಇಡು ಬಾರೋ ಇನಿಯ ಎನ್ನಯ
ಮುಡಿಗೆ

ಸಂಜೆಯ ಸಮಯವು ಜಾರುತಲಿರುವುದು
ದಿನಕರ ಪಯಣಕೆ ಅವಸರವು
ಪಶು ಪಕ್ಷಿಗಳು ಗೂಡನು ಸೇರಲು
ತವಕವು
ನಿನಗೇತಕೆ ಇಲ್ಲ ಆತುರವು

– ಕೆ ಎಂ ಬಸವರಾಜ
ನಿವೃತ್ತ ಇಂಜನೀರ್ ಹೊಸಪೇಟೆ

### ಶ್ರೀರಕ್ಷೆ

ಹುಟ್ಟಿದ ಮಗಳಿಗೆ ಅಪ್ಪನಾಗುವ ಮಾದರಿ
ಶಿಕ್ಷಕ.
ಮದುವೆಯ ನಂತರ ಗಂಡನಾಗುವ
ಆತ್ಮರಕ್ಷಕ.
ತಾಯಿಗೆ ಬೆಳೆದು ನಿಂತ ಮಗನೋ ಆಪ್ತ
ರಕ್ಷಕ.
ಆದರೆ.....
ಹೆಣ್ಣೇ ಇವರೆಲ್ಲರನ್ನು ಕಾಯಲು ಬಂದ
ರಕ್ಷತಿ
ಹೆಣ್ಣೇ ನಿನ್ನ ಒಳ್ಳೆಯ ಅಪೇಕ್ಷೆಯೇ
ಈ ಕುಟುಂಬಕ್ಕೆ ಶ್ರೀರಕ್ಷೆ.

ಶ್ರೀ– ಮಂಜುಶ್ರೀ ಮುರಳೀಧರ್
ತೋರಣಗಲ್ಲು, ಬಳ್ಳಾರಿ.

### ತುಂಗಭದ್ರಾ ನೀರಿನ ಮಟ್ಟ



| ಶನಿವಾರ : 20-01-2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.89 ಅಡಿ |
| ಒಳ ಹರಿವು | 00 ಕ್ಯೂಸೆಕ್ |
| ಹೊರ ಹರಿವು | 00 ಕ್ಯೂಸೆಕ್ |
| ಇಂದಿನ ಸಾಮರ್ಥ್ಯ | 10.128 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1619.59 ಅಡಿ |
| ಒಳ ಹರಿವು | 00 ಕ್ಯೂಸೆಕ್ |
| ಹೊರ ಹರಿವು | 9288 ಕ್ಯೂಸೆಕ್ |
| ಸಾಮರ್ಥ್ಯ | 60.187 ಟಿಎಂಸಿ |

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಕಾಲೇಜುಗಳ ಸುತ್ತಮುತ್ತ ತಂಬಾಕು ಮಾರಾಟ ನಿಷೇಧಿಸಿ



**ಹಂಪಿ ಟೈಮ್ಸ್ ಹೊಸಪೇಟೆ**

ವಿದ್ಯಾರ್ಥಿಗಳಲ್ಲಿ ತಂಬಾಕು ಬಳಕೆಯ ದುಷ್ಪರಿಣಾಳಗಳ ಕುರಿತು ಜಾಗೃತಿ ಮೂಡಿಸಿ ಶಾಲಾ–ಕಾಲೇಜುಗಳ ಸುತ್ತಮುತ್ತ ಅವುಗಳ ಮಾರಾಟವನ್ನು ನಿಲ್ಲಿಸಲು ಜಿಲ್ಲಾ ಆರೋಗ್ಯ ಅಧಿಕಾರಿಗಳಾದ ಡಾ. ಶಂಕರ್ ನಾಯಕ್ ಪ್ರಾಚಾರ್ಯರಿಗೆ ಕರೆ ನೀಡಿದರು.

ಅವರು ಇಲ್ಲಿಯ ತಾಲೂಕು ಆರೋಗ್ಯ ಅಧಿಕಾರಿಗಳ ಸಭಾಂಗಣದಲ್ಲಿ ವಿಜಯನಗರ ಜಿಲ್ಲೆಯ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಿಗಾಗಿ ಏರ್ಪಡಿಸಿದ್ದ ತಂಬಾಕು ನಿಯಂತ್ರಣಕಾಯ್ದೆಯಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ಕುರಿತ ಒಂದು ದಿನದ ಕಾರ್ಯಗಾರದವನ್ನು ಉದ್ಘಾಟಿಸಿ ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ತಂಬಾಕಿನ ಬಳಕೆ ಹೆಚ್ಚಾಗುತ್ತಿದ್ದು ಅದರ ದುಷ್ಪರಿಣಾಮದ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ಅವರು ಕರೆ ನೀಡಿದರು. ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ವಿಚಕ್ಷಣಾಧಿಕಾರಿ ಡಾ. ಷಣ್ಮುಖ ನಾಯಕ ಮಾತನಾಡಿ ತಂಬಾಕು ನಿಯಂತ್ರಣ ಕಾಯ್ದೆಯ ವಿವಿಧ ಕಾನೂನಿನ ಕ್ರಮಗಳ ಬಗ್ಗೆ ವಿವರಿಸಿದರು.

ವಿಶೇಷ ತರಬೇತಿದಾರರಾಗಿ ಆಗಮಿಸಿದ ಭೋಜರಾಜ ದೇಶದಲ್ಲಿ ತಂಬಾಕು ಸೇವನೆಯಿಂದ ದಿನಕ್ಕೆ 2200 ಜನ, 2 ನಿಮಿಷಕ್ಕೆ 3 ಜನ ವರ್ಷಕ್ಕೆ 70,000 ಜನ ಸಾವನ್ನಪ್ಪುತ್ತಿದ್ದಾರೆ. ಕ್ಯಾನ್ಸರ್ ಗೆ ಮೂಲ ಕಾರಣ ತಂಬಾಕು ಬಳಕೆ ಎಂದು ಪಿಪಿಟಿ ಮೂಲಕ ವಿವರಿಸಿದ್ದರು.

ಮಹಿಳೆ ಮತ್ತು ಮಕ್ಕಳ ಆರೋಗ್ಯ ಕಲ್ಯಾಣ ಅಧಿಕಾರಿಗಳಾದ ಡಾ. ಜಂಬಯ್ಯ ಮಾತನಾಡಿ ಕಾನೂನಿನ ಬಿಗಿಯಾದ ಕ್ರಮವನ್ನು ಅನುಷ್ಠಾನಗೊಳಿಸುವುದರ ಮೂಲಕ ತಂಬಾಕಿನ ಬಳಕೆಯನ್ನು ನಿಯಂತ್ರಿಸಲು ಸಾಧ್ಯವಿದೆ ಎಂದು ಹೇಳಿದರು.

ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ. ವಿನಯ್ ಮಾತನಾಡಿ ಶಾಲಾ ಆವರಣದಲ್ಲಿ ಮಕ್ಕಳು ತಂಬಾಕು ಬಳಕೆ ಮಾಡುತ್ತಿದ್ದರು ಹೊರಗೆ ಅವರ ಸಹವರ್ತಿಗಳ ಜೊತೆ ಇದ್ದಾಗ ಆಕರ್ಷಿತರಾಗಿ ಅದಕ್ಕೆ ತಂಬಾಕಿನ ದೃಶ್ಯಕ್ಕೆ ಬಲಿಯಾಗುತ್ತಿದ್ದಾರೆ. ಆದ್ದರಿಂದ ಶಾಲೆಗಳಲ್ಲಿಯೇ ತಂಬಾಕಿನ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸುವುದು ಅತ್ಯಗತ್ಯ ಎಂದು ಹೇಳಿದರು.

ವಿಜಯನಗರ ಜಿಲ್ಲಾ ಪದವಿಪೂರ್ವ ಕಾಲೇಜುಗಳ ನೋಡಲ್ ಅಧಿಕಾರಿಯಾಗಿ ನಾಗರಾಜ ಹವಾಲ್ದಾರ್ ಮಾತನಾಡಿ ಈಗಾಗಲೇ ಕಾಲೇಜುಗಳಲ್ಲಿ ಸುತ್ತಮುತ್ತ ತಂಬಾಕು ಮಾರಾಟವನ್ನು ನಿಷೇಧಿಸುವ ಕುರಿತ ಬೋರ್ಡುಗಳನ್ನು ಹಾಕಲಾಗಿದೆ, ಜೊತೆಗೆ ವಿದ್ಯಾರ್ಥಿಗಳಲ್ಲಿ ತಂಬಾಕಿನ ದುಷ್ಪರಿಣಾಮದ ಕುರಿತು ಅರಿವು ಮೂಡಿಸಲಾಗುವುದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ವಿಜಯನಗರ ಜಿಲ್ಲೆಯ ವಿವಿಧ ಪದವಿ ಪೂರ್ವ ಕಾಲೇಜುಗಳಿಂದ ಆಗಮಿಸಿದ ಪ್ರಾಚಾರ್ಯರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಜಿಲ್ಲಾ ಆರೋಗ್ಯ ಇಲಾಖೆ ತಂಬಾಕು ನಿಯಂತ್ರಣ ಕೋಶ ಜಿಲ್ಲಾ ಪಂಚಾಯತ್ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಏರ್ಪಡಿಸಲಾಗಿತ್ತು.

# ನಕಲಿ ಪತ್ರಕರ್ತರ ಹಾವಳಿಗೆ ಕಡಿವಾಣ ಹಾಕಲು ಒತ್ತಾಯ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತಾಲೂಕಿನಲ್ಲಿ ನಕಲಿ ಪತ್ರಕರ್ತರ ಹಾವಳಿ ಹೆಚ್ಚಾಗಿದ್ದು ಕೂಡಲೆ ಕಡಿವಾಣ ಹಾಕುವ ಜೊತೆಗೆ ಕ್ರಮ ಕೈಗೊಳ್ಳುವಂತೆ ತಾಲೂಕು ಆಡಳಿತಾಧಿಕಾರಿ ತಹಸೀಲ್ದಾರ್ ಹಾಗೂ ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ರವರಿಗೆ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಘಟಕದಿಂದ ಶನಿವಾರ ಮನವಿಪತ್ರ ಸಲ್ಲಿಸಲಾಯಿತು.

ತಹಸೀಲ್ದಾರ್ ಚಂದ್ರಶೇಖರ್ ಶಂಭಣ್ಣ ಗಾಳಿಯವರಿಗೆ ಮನವಿ ಸಲ್ಲಿಸಿದ ಬಳಿಕ ಸಂಘದ ತಾಲೂಕು ಅಧ್ಯಕ್ಷ ಉಮಾಪತಿ ಶೆಟ್ಟರ್ ಮಾತನಾಡಿ, ಇತ್ತೀಚಿಗೆ ತಾಲೂಕಿನಲ್ಲಿ ನಕಲಿ ಪತ್ರಕರ್ತರ ಹಾವಳಿ ವಿಪರಿತವಾಗಿದ್ದು, ಇದರಿಂದ ಅಧಿಕಾರಿಗಳಿಗೂ ಮತ್ತು ಜನಪ್ರತಿನಿಧಿಗಳಿಗೂ ನಿಜವಾದ ಪತ್ರಕರ್ತರು ಯಾರೆಂದು ಜಿಜ್ಞಾಸೆ ಮೂಡಿದೆ, ಇನ್ನೂ ಕೆಲವರು ಪತ್ರಕರ್ತರ ಹೆಸರಿನಲ್ಲಿ ಬ್ಲಾಕ್‌ಮೇಲ್ ಕೂಡ ಮಾಡುತ್ತಿದ್ದಾರೆ ಎನ್ನುವ ಆರೋಪಗಳು ಸಹ ಕೇಳಿಬರುತ್ತಿವೆ. ಸರ್ಕಾರಿ ನೌಕರರನ್ನು ಗುರಿಯಾಗಿಸಿಕೊಂಡು ಅವರ ಮೇಲೆ ಅನುಚಿತ ವರ್ತನೆ ಮಾಡುತ್ತಿದ್ದಾರೆ ಎಂದು ದೂರುಗಳು ಸಹ ಕೇಳಿ ಬರುವುದರಿಂದ, ಇವರ ವರ್ತನೆಯಿಂದ ನಿಜವಾದ ಪತ್ರಕರ್ತರನ್ನು ಸಮಾಜ ಅನುಮಾನದ ದೃಷ್ಟಿಯಿಂದ ನೋಡುತ್ತಿದೆ. ಇದಲ್ಲದೆ, ತಮ್ಮ ವಾಹನಗಳ ಮೇಲೆ ಪ್ರೆಸ್ ಎಂದು ಹಾಕಿಕೊಳ್ಳುವ ಮೂಲಕ ಕಾನೂನಿನ ಕಣ್ಣಿಗೆ ಮಣ್ಣೆರಚುವಂತ ಕೆಲಸ ಮಾಡುತ್ತಿದ್ದಾರೆ. ಕೂಡಲೆ ವಾಹನಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ತಹಸೀಲ್ದಾರ್ ಚಂದ್ರಶೇಖರ್ ಶಂಭಣ್ಣ ಗಾಳಿ ಮನವಿ ಸ್ವೀಕರಿಸಿ, ಅನುಮಾನ ಬರುವ ವಹನಗಳನ್ನು ಪರಿಶೀಲನೆಗೊಳಪಡಿಸುವ ಜೊತೆಗೆ ಕ್ರಮ ಕೈಗೊಳ್ಳುವ ಭರವಸೆ ನೀಡಿ, ಅಧಿಕಾರಿಗಳಿಗೆ ತಮ್ಮ ಮೇಲೆ ನಡೆಯುವ ದೌರ್ಜನ್ಯ, ಅನಾಗತ್ಯ ಕಿರುಕುಳ ನೀಡುವ ಇಂತಹ ನಕಲಿ ಪತ್ರಕರ್ತರ ಬಗ್ಗೆ ನಮ್ಮ ಗಮನಕ್ಕೆ ತರುವಂತೆ ಸೂಚಿಸಲಾಗುವುದು ಎಂದರು. ಈ ವೇಳೆ ಜಿಲ್ಲಾ ಉಪಾಧ್ಯಕ್ಷ ಬುಡ್ಡಿ ಬಸವರಾಜ್, ಕಾರ್ಯದರ್ಶಿ ಭೀಮರಾಜ್, ಹಿರಿಯರಾದ ಜೆ.ನಾಗರಾಜ್, ಅಶೋಕ ಉಪ್ಪಾರ್, ವೀರೇಶ್ ಮಜ್ಗಿ, ರಾಜಾವಲಿ, ಹಕ್ಕಂಡಿ ಬಸವರಾಜ್, ಬಿ.ಕೆ.ಬಸವರಾಜ್, ವಿಶ್ವನಾಥ ಬಾವಿಕಟ್ಟಿ ಇದ್ದರು.

## ಹಂಪಿ ಉತ್ಸವದರಂಗೋಲಿ ಸ್ಪರ್ಧೆಗೆ ಹೆಸರು ನೋಂದಾಯಿಸಲು ಅವಕಾಶ

**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವ–2024ರ ಪ್ರಯುಕ್ತ ಫೆಬ್ರವರಿ2ರಂದು ಬೆಳಿಗ್ಗೆ 6:30 ರಿಂದ 7:30ರವರೆಗೆ ಹಂಪಿಯ ವಿರೂಪಾಕ್ಷದೇವಸ್ಥಾನದಎದುರಲ್ಲಿರಂಗೋಲಿ ಸ್ಪರ್ಧೆಯನ್ನುಏರ್ಪಡಿಸಲಾಗಿದ್ದು, ಈ ಸ್ಪರ್ಧೆಗೆ ಭಾಗವಹಿಸುವ ಅಭ್ಯರ್ಥಿಗಳು ಜ.29ರೊಳಗೆ ತಮ್ಮ ಹೆಸರನ್ನುನೋಂದಾಯಿಸಿಕೊಳ್ಳಬೇಕು ಎಂದು ಗ್ರಾಮೀಣ ಕ್ರೀಡಾಕೂಟ ಮತ್ತುರಂಗೋಲಿ ಸ್ಪರ್ಧೆ, ಹಂಪಿ ಉತ್ಸವ ಸಮಿತಿನೋಡಲ್ ಅಧಿಕಾರಿಗಳು ಆಗಿರುವ ಹೊಸಪೇಟೆತಾಪಂಕಾರ್ಯ ನಿರ್ವಹಣಾಧಿಕಾರಿಗಳು ತಿಳಿಸಿದ್ದಾರೆ.


ಬೇಗನೇ ಹೆಸರು ನೋಂದಾಯಿಸುವ150 ಜನರಿಗೆ ಮಾತ್ರಸ್ಪರ್ಧೆಯಲ್ಲಿ ಭಾಗವಹಿಸುವ ಅವಕಾಶ ನೀಡಲಾಗುವುದು. ಅಭ್ಯರ್ಥಿಗಳಿಗೆ ಪ್ರಥಮ, ದ್ವಿತೀಯ ಮತ್ತುತೃತೀಯ ಬಹುಮಾನ ನೀಡಲಾಗುತ್ತದೆ. ಆಸಕ್ತ ಅಭ್ಯರ್ಥಿಗಳು ಕೂಡಲೇ ಹೆಸರನ್ನುತಮ್ಮಆಧಾರ್ ಸಂಖ್ಯೆಯೊಂದಿಗೆ ತಾಲೂಕು ಪಂಚಾಯಿತಿ ಕಚೇರಿಯ ತಾಲೂಕು ಯೋಜನಾ ಅಧಿಕಾರಿಗಳು ಅಥವಾ ತಾಲೂಕು ಕಾರ್ಯಕ್ರಮ ಯೋಜನಾಧಿಕಾರಿಗಳು (ಎನ್.ಆರ್.ಎಲ್.ಎಂ) ತಾಲೂಕು ಪಂಚಾಯಿತಿ ಹೊಸಪೇಟೆ ಇವರಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ 7760805440 ಮತ್ತು 9538505759ಗೆ ಸಂಪರ್ಕಿಸಬಹುದು.

**ರಂಗೋಲಿ ಸ್ಪರ್ಧೆಯಬಹುಮಾನ ವಿವರ:** ಚುಕ್ಕೆ ರಂಗೋಲಿಯನ್ನು ಪರಿಗಣಿಸಲಾಗುವುದು. ಕೈ ರೇಖಾಚಿತ್ರಕ್ಕೆ ಅವಕಾಶ ಇರುವುದಿಲ್ಲ. ಕಡ್ಡಾಯವಾಗಿ ರಂಗೋಲಿ ಪುಡಿಯನ್ನು ಬಳಸಬೇಕು ಹಾಗೂ ಇನ್ನಿತರೇಯಾವುದೇ ವಸ್ತುಗಳನ್ನು ಬಳಸಿದಲ್ಲಿ ಅವುಗಳನ್ನು ಸ್ಪರ್ಧೆಗೆ ಪರಿಗಣಿಸಲಾಗುವುದಿಲ್ಲ. ಕಡ್ಡಾಯವಾಗಿ ಕಪ್ಪು ಬಣ್ಣವನ್ನು ನಿಷೇಧಿಸಲಾಗಿದೆ. ಸ್ಪರ್ಧೆಗೆ 1 ಗಂಟೆ ಸಮಯ ನಿಗದಿಪಡಿಸಲಾಗಿರುತ್ತದೆ. 10x10 ಅಡಿ ಜಾಗದೊಳಗೆ ರಂಗೋಲಿ ಹಾಕಬೇಕು. ಅಭ್ಯರ್ಥಿಗೆ ನೀಡಿರುವಂತಹ ಕ್ರಮ ಸಂಖ್ಯೆಯನ್ನು ಮಾತ್ರ ಬರೆಯಬೇಕು. ಯಾವುದೇಕಾರಣಕ್ಕೆ ತಮ್ಮ ಹೆಸರನ್ನು ಬರೆಯುವಂತಿಲ್ಲ. ಭಾಗವಹಿಸುವ ಆಸಕ್ತಿಯುತ ಅಭ್ಯರ್ಥಿಗಳಿಗೆ ಯಾವುದೇ ವಯೋಮಿತಿ ಇರುವುದಿಲ್ಲ.ಯಾವುದೇ ಚರ್ಚೆಗೆ ಅವಕಾಶ ಇರುವುದಿಲ್ಲ. ನಿರ್ಣಾಯಕರ ನಿರ್ಣಯವೇ ಅಂತಿಮ ನಿರ್ಣಯ, ಚುಕ್ಕೆ ರಂಗೋಲಿಯನ್ನುನಿಗಧಿಪಡಿಸಿದಸಮಯದೊಳಗೆಪೂರ್ಣಗೊಳಿಸಬೇಕು.

## ಅಲಂಕಾರಗೊಂಡ ದೇಗುಲಗಳು

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಲೋಕಾರ್ಪಣೆ ಹಿನ್ನೆಲೆಯಲ್ಲಿ, ತಾಲೂಕಿನಾದ್ಯಂತ ದೇಗುಲಗಳೆಲ್ಲ ಅಲಂಕಾರಗೊಂಡಿವೆ. ಸೋಮವಾರ ಅಯೋಧ್ಯೆಯಲ್ಲಿ ಶ್ರೀರಾಮ ಮೂರ್ತಿ ಪ್ರತಿಷ್ಠಾಪನೆಯೊಂದಿಗೆ ದೇಗುಲ ಲೋಕಾರ್ಪಣೆ ಗೊಳ್ಳುವುದನ್ನು ದೇಶವೇ ಎದುರು ನೋಡುತ್ತಿದೆ. ಈ ಹಿನ್ನೆಲೆಯಲ್ಲಿ ತಾಲೂಕಿನ ವಿವಿಧ ದೇಗುಲಗಳು ಕೇಸರಿ ಬಣ್ಣ, ತೋರಣಗಳಿಂದ ಕಂಗೊಳಿಸುತ್ತಿವೆ. ಶ್ರೀರಾಮನ ಭಕ್ತರು ದೇಗುಲಗಳಿಗೆ ತೆರಳಿ ಅಲಂಕಾರ ಮಾಡಿರುವುದಲ್ಲದೆ, ತಾಲೂಕಿನ ಅಂಕಸಮುದ್ರ, ಹಂಪಾಪಟ್ಟಣ, ತಂಬ್ರಹಳ್ಳಿ, ಮೋರಗೆರೆ, ಹನಸಿ, ಕೋಗಳಿತಾಂಡ, ವಲ್ಲಭಾಪುರ, ಉಪ್ಪಾರಗಟ್ಟಿ ಸೇರಿದಂತೆ ಬಹುತೇಕ ಗ್ರಾಮಗಳ ದೇಗುಲಗಳಲ್ಲಿ ವಿಶೇಷ ಪೂಜೆ, ಹೋಮ, ಪ್ರಸಾದವನ್ನು ಹಮ್ಮಿಕೊಂಡಿದ್ದಾರೆ. ಪಟ್ಟಣದ ಹಗರಿ ಶ್ರೀಆಂಜನೇಯಸ್ವಾಮಿ, ವಿವಿಧ ದೇಗುಲಗಳಲ್ಲಿ ವಿಶೇಷ ಪೂಜೆ ನಡೆಯುವ ಮೂಲಕ ಲೋಕರ್ಪಣೆಗೊಳ್ಳುವ ರಾಮಮಂದಿರಕ್ಕೆ ಶುಭಕೋರುತ್ತಿದ್ದಾರೆ.



**ಶ್ರೀರಾಮನ ಮೂರ್ತಿ ಪ್ರತಿಷ್ಠಾಪನೆ ಮತ್ತು ಶ್ರೀರಾಮ ಮಂದಿರ ಉದ್ಘಾಟನೆ ಜನತೆಯಲ್ಲಿ ಸಂತಸ ಸಂಭ್ರಮ ತಂದಿದೆ, ನಮ್ಮ ಮಠಾಧೀಶರ ಪರಿಷತ್‌ನಿಂದಲೂ ಶ್ರೀರಾಮ ಮಂದಿರ ಲೋಕಾರ್ಪಣೆ ಯಶಸ್ವಿಯಾಗಲಿ ಎಂದು ಹಾರೈಸುತ್ತೇವೆ.**
– ಡಾ.ಮಹೇಶ್ವರ ಸ್ವಾಮೀಜಿ. ಪುಣ್ಯ ಕ್ಷೇತ್ರ ನಂದಿಪುರ.

**ಶ್ರೀರಾಮಮಂದಿರ ದೇಶದ ಜನತೆಯ ಶತಮಾನಗಳ ಬಯಕೆ ಈಡೇರಿದಂತಾಗಿದೆ. ಶ್ರೀರಾಮ ಮೂರ್ತಿ ಪ್ರಾಣಪ್ರತಿಷ್ಠಾಪನೆಯನ್ನು ಕಾತರದಿಂದ ಕಾಯುತ್ತಿರುವೆ. ಈ ಸಮಯ ಸುವರ್ಣಕ್ಷರದಲ್ಲಿ ಬರೆದಿಡುವಂತ ದಿನವಾಗಿದೆ.**
– ತಳವಾರ ರಾಘವೇಂದ್ರ
ಪುರಸಭೆ ಮಾಜಿ ಅಧ್ಯಕ್ಷ, ಹಗರಿಬೊಮ್ಮನಹಳ್ಳಿ.

## ಫ್ಲೆಕ್ಸ್ ಅಳವಡಿಕೆಗೆ ಪರವಾನಿಗೆ ಕಡ್ಡಾಯ

**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ:**

ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನಿಗದಿತ ಪಡಿಸಿದ ಸ್ಥಳಗಳಲ್ಲಿ ಸಾರ್ವಜನಿಕರು ಫ್ಲೆಕ್ಸ್, ಬ್ಯಾನ್ಯರ್ ಹಾಗೂ ಬಂಟಿಂಗ್ ಗಳನ್ನು (ಬಟ್ಟೆಯ)ಹಾಕಲು ಇಚ್ಛಿಸಿದಲ್ಲಿ ಸಂಭಂದಿಸಿದ ಸ್ಥಳಿಯ ಆಡಳಿತದಿಂದ ಫ್ಲೆಕ್ಸ್,ಬ್ಯಾನರ್,ಬಂಟಿಂಗ್ ಗಳನ್ನು ಕಟ್ಟುವವರು ಕಡ್ಡಾಯವಾಗಿ ಪಟ್ಟಣಪಂಚಾಯತಿಯಿಂದ ಪರವಾನಿಗೆ ಪಡೆದು ಸಾರ್ವಜನಿಕರಿಗೆ ಹಾಗೂ ರಸ್ತೆ ಸಂಚಾರಕ್ಕೆ ತೊಂದರೆ ಆಗದಂತೆ ಅಳವಡಿಸತಕ್ಕದ್ದು,ತಪ್ಪಿದಲ್ಲಿ.ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು ಎಂದು ಪ.ಪಂ.ಮುಖ್ಯಾಧಿಕಾರಿ ಗಾದಿಲಿಂಗನಗೌಡರವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದರು.

**ಬಜೆಟ್ ಗೆ ಸಲಹೆಗೆ :** 2024– 25 ನೇ ಸಾಲಿನ ಬಜೆಟ್ ರಚನೆ ಕುರಿತು ಸಲಹೆ ನೀಡಲು ಸಭೆ ಕರೆಯ ಲಾಗಿದೆ. ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯಿತಿಯು 2024–25 ಸಾಲಿಗಾಗಿ ಬಜೆಟ್ ಮುಂಗಡ ಪತ್ರ ತಯಾರಿಕೆಗೆ ಹಾಲಿ ಪ.ಪಂ.ಸ 'ದಸ್ಯರು,ಗಣ್ಯವ್ಯಕ್ತಿಗಳುನೊಂದಾಯಿತಿಸಂಘ–ಸಂಸ್ಥೆಗಳಸದಸ್ಯರು,ಜನಪ್ರತಿನಿಧಿಗಳು ಮತ್ತು ವಾಣಿಜ್ಯ ಹಾಗೂ ಕೈಗಾರಿಕಾಸಂಘಗಳ ಸದಸ್ಯರ ಆಯವ್ಯಯ ಪೂರ್ವಭಾವಿಸಭೆಯನ್ನು ಪಂಚಾಯಿತಿಯ ಸಭಾಂಗಣದಲ್ಲಿ ಸೋಮವಾರ(22) ರಂದು, ಬೆಳಿಗ್ಗೆ 11ಗಂಟೆಗೆ ಕರೆಯಲಾಗಿದೆ ಮೇಲ್ಕಂಡ ಆಸಕ್ತರು ಸಭೆಯಲ್ಲಿ ಪಾಲ್ಗೊಂಡು ಸಲಹೆ–ಸೂಚನೆಗಳನ್ನು ನೀಡಲು ಮುಖ್ಯಾಧಿಕಾರಿ ತಿಳಿಸಿದರು.

## ಜ.25 ರಂದು ಜಾಬ್‌ಡ್ರೈವ್

**ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಕೊಪ್ಪಳದಲ್ಲಿ ಜನವರಿ 25 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 01.30 ರವರೆಗೆ ಜಾಬ್‌ಡ್ರೈವ್‌ವನ್ನು ಆಯೋಜಿಸಲಾಗಿದ್ದು, ಜಾಬ್‌ಡ್ರೈವ್‌ನಲ್ಲಿ ಖಾಸಗಿ ಸಂಸ್ಥೆಗಳು ಭಾಗವಹಿಸಿ ಖಾಲಿ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಿದ್ದಾರೆ. ಜಾಬ್‌ಡ್ರೈವ್‌ಗೆ ಉಚಿತ ಪ್ರವೇಶವಿದ್ದು, 18 ರಿಂದ 30 ವರ್ಷದ ಪಿಯುಸಿ/ತತ್ಸಮಾನ, ಡಿಪ್ಲೋಮಾ, ಐಟಿಐ, ಯಾವುದೇ ಪದವಿ ಅಭ್ಯರ್ಥಿಗಳನ್ನು ನೇರ ಸಂದರ್ಶನ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಅರ್ಹ ವಿದ್ಯಾರ್ಹತೆ ಹೊಂದಿದ ಯುವಕ ಮತ್ತುಯುವತಿಯರು, ನಿರುದ್ಯೋಗಿ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಎಲ್ಲ ಪ್ರಮಾಣ ಪತ್ರಗಳು ಮತ್ತು ಆಧಾರ್ ಕಾರ್ಡಿನ ಪ್ರತಿ, ಬಯೋಡಾಟಾ ಹಾಗೂ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳೊಂದಿಗೆ ಜಾಬ್‌ಡ್ರೈವ್‌ನಲ್ಲಿ ಭಾಗವಹಿಸಿ, ಉದ್ಯೋಗದ ನೆರವನ್ನು ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ: 8105693234 ಸಂಪರ್ಕಿಸಬಹುದು.

# ರೈತರ ಸಾಲಕ್ಕೆ ಶೇ.4ರ ಬಡ್ಡಿ ಸಹಾಯಧನ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಕೃಷಿ ಇಲಾಖೆ ವತಿಯಿಂದ ರೈತ ಉತ್ಪಾದಕರ ಸಂಸ್ಥೆಗಳ ಸಾಲಕ್ಕೆ ಶೇ.4ರ ಬಡ್ಡಿ ಸಹಾಯಧನಕ್ಕಾಗಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕ ಕೆ.ಮಲ್ಲಿಕಾರ್ಜುನ ಅವರು ತಿಳಿಸಿದ್ದಾರೆ.

2023–24ನೇ ಸಾಲಿನ ಆಯವ್ಯಯದಲ್ಲಿ ರೈತ ಉತ್ಪಾದಕರ ಸಂಸ್ಥೆಗಳನ್ನು ಬಲಪಡಿಸಲು ಹಿಂದುಳಿದ ತಾಲ್ಲೂಕಗಳ 100 ರೈತ ಉತ್ಪಾದಕ ಸಂಸ್ಥೆಗಳಿಗೆ ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳು ನೀಡುವ ತಲಾ ರೂ.20 ಲಕ್ಷ ವರೆಗಿನ ಸಾಲಕ್ಕೆ ಶೇ.4 ರ ಬಡ್ಡಿ ಸಹಾಯಧನ ನೀಡಲಾಗುವುದು ಎಂದು ಘೋಷಿಸಲಾಗಿದೆ ಹಾಗೂ ಸರ್ಕಾರದಿಂದ ಅನುಮೋದನೆ ನೀಡಲಾಗಿದೆ.

ಕೃಷಿ ಇಲಾಖೆಯು (ಜಲಾನಯನ ಅಭಿವೃದ್ಧಿ ಇಲಾಖೆ) ಜಿಲ್ಲೆಯ ಹಿಂದುಳಿದ ತಾಲ್ಲೂಕುಗಳಲ್ಲಿ ಕಂಪನಿ ಕಾಯ್ದೆ 2013 ಅಡಿಯಲ್ಲಿ ನೋಂದಾಯಿಸಿ, ಕನಿಷ್ಠ 600 ರೈತ, ಷೇರುದಾರರನ್ನು ಹೊಂದಿ, 2022–23ನೇ ಸಾಲಿನಲ್ಲಿ ವಾರ್ಷಿಕ ಕನಿಷ್ಠ ರೂ.20 ಲಕ್ಷಗಳ ವರೆಗೆ ವ್ಯಾಪಾರ ವಹಿವಾಟು ಮಾಡಿ, ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳ ಮೂಲಕ 2023ರ ಏ.01 ರಿಂದ ಗರಿಷ್ಠ ರೂ.20 ಲಕ್ಷಗಳವರೆಗೆ ರೈತ ಉತ್ಪಾದಕರ ಸಂಸ್ಥೆಗಳು ಪಡೆದ ಸಾಲಕ್ಕೆ ಶೇ.4 ರಷ್ಟು ಬಡ್ಡಿ ಸಹಾಯಧನ ನೀಡಲು ರೈತ ಉತ್ಪಾದಕರ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಿದೆ.

ಅರ್ಜಿ ಸಲ್ಲಿಸಲು ಜ.30 ಕೊನೆಯ ದಿನವಾಗಿದೆ. ಸ್ವೀಕೃತವಾದ ಸೂಕ್ತ ಅರ್ಜಿಗಳಿಗೆ ನಿಯಮಾನುಸಾರ ಬಡ್ಡಿ ಸಹಾಯಧನವನ್ನು ಸಂಬಂಧಿಸಿದ ರೈತ ಉತ್ಪಾದಕರ ಸಂಸ್ಥೆಗಳ ಸಾಲದ ಖಾತೆಗೆ ಪಾವತಿಸಲಾಗುವುದು.

ಆಸಕ್ತಿಯುಳ್ಳ ಅರ್ಹ ರೈತ ಉತ್ಪಾದಕರ ಸಂಸ್ಥೆಗಳು ಅರ್ಜಿಯನ್ನು ಜಂಟಿ ಕೃಷಿ ನಿರ್ದೇಶಕರ, ಉಪ ಕೃಷಿ ನಿರ್ದೇಶಕರ, ಸಹಾಯಕ ಕೃಷಿ ನಿರ್ದೇಶಕರ, ರೈತ ಸಂಪರ್ಕ ಕೇಂದ್ರದ ಕಚೇರಿಗೆ ಅರ್ಜಿ ಸಲ್ಲಿಸಬೇಕು ಎಂದು ತಿಳಿಸಿದ್ದಾರೆ.

**IN THE COURT OF THE CIVIL JUDGE AND J.M.F.C. AT KUDLIGI**
**Crl. Misc. No.994/2023**

Between: 1. Smt. Basamma w/o late Halappa aged about 80 years, 2. Smt. Eramma W/o late Basappa, aged about 79 years, 3. K.G.Veeresha S/o late Nagappa, aged about 68 years,

All are Hindus, agriculturists, R/o T. Kallahalli Village, in Kudligi Taluk Vijayanagara district.
…. Petitioners And

The Tahasildar, Kudligi ….Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONERS.**

Whereas the above petitioners have instituted above petition to get the death certificate of their deceased petitioner No.1's brother-in-law & No-2's husband, and petitioner No.3's brother by name late Basappa S/o late Nagappa was died on 01.06.1990 at T.Kallahalli village, in Kudligi Taluk, and Vijayanagara District. On the file of the civil Judge & JMFC at Kudligi, The Tahsildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 24.01.2024 at 11 A.M. and interested persons are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 05.12.2023

By Order of the court
Chief Ministerial Officer
Civil Judge & J.M.F.C at Kudligi

Sri. Parameshwara. H
Advocate, Kudligi

**INTHE COURT OF THE CIVIL JUDGE AND J.M.F.C. AT KUDLIGI**
**Crl. Misc. No.1453/2023**

Between: 1.G.Marakka D/O Late G.H marappa late Rajappa .aged about 70 yers , 2.Jayamma wife of Doddasiddappa aged about 66 years , 3.Kuri Marappa son of late G.H marappa aged about 65 years , 4. Sannadoddappa son of Late G.H marappa aged about 58 years , 5.Parusappa son of late Hanumanthappa aged about 65 years
All are Hindu, Agriculturist, residing at Suladahalli Village Kudligi Taluk Vijayanagara Dist ....Petitioner And
1. The Tahasildar Kudligi ...Respondent
G.Doddappa S/O G.H marappa Suladahalli

**SUMMONS TO INTERESTED PERGRAND FATHER U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased petitioners and respondent No.2 grandfather by name Gollara Hotte Bharamappa son of Late Gollara Sannamarappa was died on 07/07/1950 Suladahalli Village Kudligi Taluk Vijayanagara Dist. on the file of the civil Judge& JMFC at Kudligi, the The Tahasildar Kudligi is the respondent. The interested per Great s are hereby summoned to appear in this court in per or by pleader duly instructed and able to answer all material question relating to the above petition on 31/01/2024 at 11 A.M. and interested per sare directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte.
Given under my hand and seal of this Hon'ble Court on 12/01/2024

By Order of the court
Chief Ministerial
Officer Civil Judge J.D) Court Kudligi

**N.Narappa, Advocate, Kudligi**

**INTHE COURT OF THE CIVIL JUDGE AND J.M.F.C. AT KUDLIGI**
**Crl. Misc. No.718/2023**

Between:
1. Basavaraja Son of late Thippeswamy aged about 71, years are Hindu, Agriculturist, residing at Katrakatti Village Kudligi Taluk Vijayanagara Dist
…Petitioner And
The Tahasildar Kudligi ...Respondent

**SUMMONS TO INTERESTED PERGRAND FATHER U/O V RULE 20(A) R/W SEC 151 OF CPC FILED ON BEHALF OF THE PETITIONER**

Whereas the above petitioners have instituted above petition to get the death certificate of their deceased petitioners Father brother wife by name Rudramma wife of late Ajjappa was died on 03/05/1992 Katrakatti Village Kudligi Taluk Vijayanagara Dist. on the file of the civil Judge& JMFC at Kudligi, the The Tahasildar Kudligi is the respondent. The interested per Great s are hereby summoned to appear in this court in per or by pleader duly instructed and able to answer all material question relating to the above petition on 22/01/2024 at 11 A.M. and interested per sare directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 06/12/2024

By Order of the court
Chief Ministerial
Officer Civil Judge J.D) Court Kudligi

**N.Narappa**
**Advocate, Kudligi**

# ರಾಮನ ಮನ ತಣಿಸಿದ ಹಂಪಿ

## ಹಂಪಿಯಲ್ಲಿ ಚಾತುರ್ಮಾಸ ಪೂರ್ಣಗೊಳಿಸಿದ ಶ್ರೀರಾಮ | ರಾಮನ ಕಥೆ ಹೇಳುತ್ತವೆ ಇಲ್ಲಿನ ದೇಗುಲಗಳು

■ **ಎಂ.ಎಂ.ಶಿವಪ್ರಕಾಶ** ಹೊಸಪೇಟೆ

ಹಂಪಿಯ ಪ್ರಾಕೃತಿಕ, ಧಾರ್ಮಿಕ–ಪೌರಾಣಿಕ, ಐತಿಹಾಸಿಕ, ಸಾಂಸ್ಕೃತಿಕ, ಜಾನಪದ ಹಾಗೂ ಚಾರಿತ್ರಿಕವಾಗಿ ಅತ್ಯಂತ ಮಹತ್ವದ ಕ್ಷೇತ್ರವಾಗಿದೆ. ಶಿವನನ್ನು ಒಲಿಸಿಕೊಳ್ಳುವ ಸಲುವಾಗಿ ಪಾರ್ವತಿ ತಪಸ್ಸಿಗೆ ಕುಳಿತಾಗ ಅವಳ ತಪಸ್ಸಿಗೆ ಮೆಚ್ಚಿ ಶಿವ ಹಂಪಿಯ ಹೇಮಕೂಟದಲ್ಲಿ ಪ್ರತ್ಯಕ್ಷನಾದ ಸ್ಥಳ. ನಂತರ ಶಿವ ಪಾರ್ವತಿಯರ ಕಲ್ಯಾಣೋತ್ಸವ ನಡೆದ ಪವಿತ್ರವಾದ ಧಾರ್ಮಿಕ ಕ್ಷೇತ್ರ. ಇದು ಶಿವ ಪ್ರಧಾನವಾದ ಪುಣ್ಯಕ್ಷೇತ್ರ .ಇಲ್ಲಿ ಹರಿಯುವ ನದಿಯು ಗಂಗಾ ನದಿಗೆ ಸಮಾನವೆಂದು, ವಿರುಪಾಕ್ಷನನ್ನು ಸಾಕ್ಷಾತ್ ಕಾಶಿ ವಿಶ್ವನಾಥನೇ ಎಂದು ಜನರು ನಂಬಿಕೊಂಡು ಪೂಜಿಸುತ್ತಾ ಬಂದಿದ್ದಾರೆ. ಇಷ್ಟೇ ಅಲ್ಲ ತೇತ್ರಾಯುಗದ ರಾಮಾಯಣದ ಕಿಷ್ಕಿಂದೆಯಾಗಿದ್ದದ್ದು ಹಂಪಿಯ ಈ ಪ್ರದೇಶ. ಇದು ಅಂಜನಾದ್ರಿ ನೆಲ, ಹನುಮ ಜನಿಸಿದ ನಾಡು.



ರಾಮಾಯಣದ ಕಿಷ್ಕಿಂದ ಕಾಂಡದ ಪ್ರಕಾರ ಸೀತೆಯನ್ನು ಹುಡುಕುತ್ತಾ ಹಂಪಿಯ ಪ್ರದೇಶಕ್ಕೆ ಬಂದಿದ್ದ ಶ್ರೀರಾಮ. ಆಗ ಶ್ರೀರಾಮ – ಸುಗ್ರೀವರ ಸಖ್ಯ ವಾಲಿವಧೆ. ಇಲ್ಲಿಂದಲೇ ಸೀತಾನ್ವೇಷಣೆಗೆ ಪ್ರಾರಂಭ. ಹಂಪಿಯ ಮಾಲ್ಯವಂತ ಪರ್ವತದ ಗುಹೆಯಲ್ಲಿ ನಾಲ್ಕು ತಿಂಗಳ ಕಾಲ ಶ್ರೀರಾಮ ಲಕ್ಷ್ಮಣರು ಇಲ್ಲಿಯೇ ತಂಗಿದ್ದರು ಎನ್ನುವ ನಂಬಿಕೆ. ಈ ಮಾಲ್ಯವಂತ ಪರ್ವತದಲ್ಲಿ ಶ್ರೀರಾಮ ಲಕ್ಷ್ಮಣರು ಕೆಲಕಾಲ ಇದ್ದು ಹೋಗಿದ್ದರ ನೆನಪಿಗಾಗಿ ವಿಜಯನಗರ ಸಾಮ್ರಾಜ್ಯದ ಅರಸರು ದೇವಾಲಯಗಳನ್ನು ನಿರ್ಮಿಸಿ ಅವರ ನೆನಪುಗಳನ್ನು ಜೀವಂತಗೊಳಿಸಿದ್ದಾರೆ. ಅಯೋಧ್ಯೆಯಲ್ಲಿ ಶ್ರೀರಾಮ ಲಲ್ಲನ ಮೂರ್ತಿ ಪ್ರಾಣ ಪ್ರತಿಷ್ಠಾನದ ಸಂದರ್ಭದಲ್ಲಿ ಹಂಪಿ ಹಾಗೂ ಶ್ರೀರಾಮರ ಸಂಬಂಧದ ಕುರಿತ ಒಂದು ಚಿತ್ರಣ ಇಲ್ಲಿದೆ ಹಂಪೆಯಿಂದ ಅಂಜನಾದ್ರಿ ವರಗಿನ ಪ್ರದೇಶವು ರಾಮಾಯಣ ಕಾಲದ ಕಿಷ್ಕಿಂದೆಯಾಗಿತ್ತು. ನಾಲ್ಕನೇ ಅಧ್ಯಾಯದಲ್ಲಿರುವ ಸ್ಥಳ ಪುರಾಣ ಐತಿಹ್ಯಗಳ ಪ್ರಕಾರ ಹಂಪಿಯ ಸುತ್ತಲಿನ ಪ್ರದೇಶವೇ ಕಿಷ್ಕಿಂದಿಯಾಗಿದ್ದದ್ದು. ಹನುಮ ಜನಿಸಿದ ನಾಡಾಗಿರುವುದರಿಂದ ಇಂದಿಗೂ ಈ ಪ್ರದೇಶವು ವಾನರ ಬೀಡಾಗಿದೆ, ಜಾಂಬುವಂತನ ನೆಲ. ಇಂದಿಗೂ ಹಂಪಿ ಪ್ರದೇಶವು ವಾನರ ಹಾಗೂ ಜಾಂಬುವಂತನ (ಕರಡಿಗಳ) ಆವಾಸಸ್ಥಾನವಾಗಿದೆ.

### ಹಂಪಿಗೆ ಶ್ರೀರಾಮನ ಆಗಮನ

ರಾವಣ ಸೀತೆಯನ್ನು ಅಪಹರಿಸಿಕೊಂಡು ಲಂಕೆಗೆ ಪುಷ್ಪಕ ವಿಮಾನದ ಮೂಲಕ ಹೋಗಿದ್ದು ಇದೇ ಮಾರ್ಗದಲ್ಲಿ. ಹೀಗೆ ಸೀತಾಮಾತೆಯು ಹೋಗುತ್ತಿರುವಾಗ ತನ್ನ ಕೆಲ ಆಭರಣಗಳನ್ನು ಈ ಪ್ರದೇಶದಲ್ಲಿ ಹಾಕಿದ್ದಳಂತೆ, ಇಲ್ಲಿಯ ಸುಗ್ರೀವ ಗುಹೆಯಲ್ಲಿ ಆಭರಣಗಳನ್ನು ಇರಿಸಲಾಗಿತ್ತಂತೆ. ಸೀತೆಯನ್ನು ಹುಡುಕುತ್ತಾ ಮಾತಂಗ ಪರ್ವತದ ಮೂಲಕ ಹಂಪಿಯನ್ನು ಪ್ರವೇಶಿಸುತ್ತಾರೆ. ಶ್ರೀರಾಮನ ಬರುವಿಕೆಗಾಗಿಯೇ ಶಬರಿ ಇಲ್ಲಿ ಕಾದು ಕುಳಿತಿದ್ದಳಂತೆ. ಶ್ರೀರಾಮನ ಆಗಮನವಾಗುತ್ತಿದ್ದಂತೆ ಶಬರಿ ಶ್ರೀರಾಮನ ದರ್ಶನ ಹಾಗೂ ಆಶೀರ್ವಾದವನ್ನು ಪಡೆದು ಬ್ರಹ್ಮ ಲೋಕಕ್ಕೆ ಹೋಗಲು ಅಪ್ಪಣೆ ಪಡೆಯುತ್ತಾಳಂತೆ. ನಂತರ ಇದೇ ಮಾತಂಗ ಪರ್ವತದ ಬಳಿ ಶ್ರೀರಾಮ ಸುಗ್ರೀವರ ಭೇಟಿಯಾಗುತ್ತದೆ. ಶ್ರೀರಾಮನ ಸಹಾಯದಿಂದ ವಾಲಿಯ ವಧೆಯಾಗುತ್ತದೆ ಮುಂದೆ ಸುಗ್ರೀವನಿಗೆ ಶ್ರೀರಾಮ ಪಟ್ಟಾಭಿಷೇಕ ಮಾಡಿಸುತ್ತಾನೆ. ಸೀತೆಯನ್ನು ಹುಡುಕಲು ಶ್ರೀರಾಮನಿಗೆ ಸಹಾಯ ಸುಗ್ರೀವ ಮಾಡುತ್ತಾನೆ.

### ಮಾಲ್ಯವಂತ

ಶ್ರೀರಾಮ ಹಂಪಿಗೆ ಬಂದ ಸಂದರ್ಭದಲ್ಲಿ ಮುಂಗಾರಿನ ಮಳೆಯ ಕಾಲ ಪ್ರಾರಂಭವಾಗುತ್ತದೆ, ಆದ್ದರಿಂದ ಪ್ರಯಾಣ ಮುಂದುವರಿಸುವುದು ಕಷ್ಟಕರವೆಂದು ತಿಳಿದ ಶ್ರೀರಾಮ ಲಕ್ಷ್ಮಣರು ಹಂಪಿಯ ಮಾಲ್ಯವಂತ ಪರ್ವತಕ್ಕೆ ಬಂದು ಅಲ್ಲಿಯ ಗುಹೆಯಲ್ಲಿ ತಂಗುತ್ತಾರೆ. ಸೀತೆಯನ್ನು ಕಳೆದುಕೊಂಡು ದುಃಖಿತನಾಗಿದ್ದ ಶ್ರೀರಾಮನು ಆತಂಕಕ್ಕೆ ಒಳಗಾಗಿರುತ್ತಾನೆ. ಇದನ್ನು ಕಂಡ ಮಾಲ್ಯವಂತ ಮುನಿಗಳು ಶ್ರೀರಾಮನನ್ನು ಸಮಾಧಾನ ಪಡಿಸಿ ವಿರೂಪಾಕ್ಷನ ದರ್ಶನ ಮಂತ್ರವನ್ನು ಜಪಿಸುವಂತೆ ಮಾರ್ಗದರ್ಶನ ಮಾಡುತ್ತಾರೆ. ವಿರೂಪಾಕ್ಷ ಜಪದೊಂದಿಗೆ ಪಂಪ ವಿರೂಪಾಕ್ಷನನ್ನು ಪೂಜಿಸುತ್ತಾರೆ. ಆಗ ವಿರೂಪಾಕ್ಷ ಮಾಲ್ಯವಂತ ಬೆಟ್ಟದಲ್ಲಿ ಪ್ರತ್ಯಕ್ಷನಾಗಿ ದರ್ಶನ ನೀಡುತ್ತಾನೆ. ನಾಲ್ಕು ತಿಂಗಳ ಕಾಲ ಈ ಮಾಲ್ಯವಂತ ಪರ್ವತದಲ್ಲಿ ಶ್ರೀರಾಮ ಲಕ್ಷ್ಮಣರು ತಂಗಿದ್ದರು. ಈ ಸಂದರ್ಭದಲ್ಲಿ ಕುಡಿಯುವ ನೀರಿಗಾಗಿ ಲಕ್ಷ್ಮಣ ಇಲ್ಲಿಯ ಬಂಡೆಯೊಂದಕ್ಕೆ ಬಾಣಬಿಟ್ಟು ನೀರನ್ನು ಬರಿಸುತ್ತಾನೆ ಅಂದಿನಿಂದ ಈತನಕದವರಿಗೆ ಈ ಸೀಳು ಕಲ್ಲಿನಲ್ಲಿ ನೀರು ಬತ್ತಿಯೇ ಇಲ್ಲವೆಂಬ ನಂಬಿಕೆ ಈ ಸೀಳು ಕಲ್ಲನ್ನು ಪಟ್ಟತ್ತ ಶಿಲೆ ಎಂದು ಕರೆಯುತ್ತಾರೆ.

ಈ ಕಿಷ್ಕಂದ ಪ್ರದೇಶದಲ್ಲಿ ಶ್ರೀರಾಮ ಲಕ್ಷ್ಮಣರು ತಂಗಿದ್ದ ಕಾಲದಲ್ಲಿ ಹನುಮ ಮತ್ತು ಜಾಂಬುವಂಥನ ಭೇಟಿಯಾಗುತ್ತದೆ. ಸೀತೆಯನ್ನು ಹುಡುಕಲು ಇವರು ಸಹಾಯ ಹಸ್ತವನ್ನು ನೀಡುತ್ತಾರೆ ಆಗ ಶ್ರೀರಾಮಚಂದ್ರ ತನ್ನ ಮುದ್ರಾ ಉಂಗುರವನ್ನು ಹನುಮಂತನಿಗೆ ನೀಡಿ ಸೀತೆಗೆ ತಲುಪಿಸಲು ಕೇಳುತ್ತಾನೆ. ಆಗ ಹನುಮ ಇಲ್ಲಿಂದಲೇ ಲಂಕೆಗೆ ಹಾರಿ ಹೋಗಿ ಲಂಕೆಯನ್ನು ತಲುಪಿ ಅಲ್ಲಿಂದ ಸೀತಾ ಮಾತೆಯನ್ನು ಭೇಟಿಯಾಗಿ ಶ್ರೀರಾಮನ ಮುದ್ರಾ ಉಂಗುರವನ್ನು ನೀಡುತ್ತಾನೆ .ಆಗ ಸೀತಾಮಾತೆ ತನ್ನ ಬಳಿಯಿದ್ದ ಚುಡಾಮಣಿಯನ್ನು ಹನುಮಂತನಿಗೆ ಕೊಟ್ಟು ಶ್ರೀರಾಮನಿಗೆ ಕಳಿಸುತ್ತಾಳೆ. ಈ ಮಧ್ಯೆ ಚಾತುರ್ಮಾಸದ ಸಮಯದಲ್ಲಿ ಶ್ರೀರಾಮ ಮತ್ತು ಲಕ್ಷ್ಮಣರು ತಮ್ಮ ಪೂರ್ವಜರು ಹಾಗೂ ತಂದೆ ದಶರಥನಿಗೆ ಹಂಪಿಯ ಚಕ್ರ ತೀರ್ಥದಲ್ಲಿ ಪಿಂಡಪ್ರದಾನವನ್ನು ಮಾಡಿದ್ದಾರೆ ಎನ್ನಲಾಗಿದೆ.

### ಶ್ರೀರಾಮನ ನೆನಪಿಗಾಗಿ ದೇವಾಲಯ

ಶ್ರೀರಾಮ ಲಕ್ಷ್ಮಣರು ನಾಲ್ಕು ತಿಂಗಳ ಕಾಲ ಹಂಪಿಯ ಮಾಲ್ಯವಂತ ಪರ್ವತದಲ್ಲಿ ಇದ್ದು ತಪಸ್ಸು ಪೂಜೆ ಮಾಡಿದ ಸ್ಥಳದಲ್ಲಿ ಲಿಂಗವನ್ನು ಸ್ಥಾಪಿಸಿ ಪೂಜಿಸಲಾಗುತ್ತದೆ . ಆದರೆ ಮತ್ತೊಂದು ನಂಬಿಕೆಯ ಪ್ರಕಾರ ಮಾಲ್ಯವಂತ ಪರ್ವತದಿಂದ ದಿನವೂ ಹೋಗಿ ವಿರೂಪಾಕ್ಷನನ್ನು ಪೂಜಿಸಲು ಆಗದೆ ಇದ್ದುದರಿಂದ ಮಾಲ್ಯವಂತದಲ್ಲಿಯೇ ವಿರೂಪಾಕ್ಷ ಲಿಂಗವನ್ನು ಪ್ರತಿಷ್ಠಾಪಿಸಿ ವಿರೂಪಾಕ್ಷ ನನ್ನು ಶ್ರೀರಾಮ ಪೂಜಿಸಿದ್ದ ಎನ್ನಲಾಗಿದೆ. ಹೀಗೆ ಶ್ರೀ ರಾಮನ ನೆನಪು ಜೀವಂತವಿರುವಂತೆ ಮಾಲ್ಯವಂತ ಪರ್ವತದಲ್ಲಿ ವಿಜಯನಗರದ ಅರಸ ಕೃಷ್ಣದೇವರಾಯರು ರಘುನಾಥ ದೇವಾಲಯವನ್ನು ನಿರ್ಮಿಸಿದ್ದಾರೆ. ಇಲ್ಲಿ ರಾಮ ಲಕ್ಷ್ಮಣ ಸೀತೆ ಹಾಗೂ ಹನುಮಂತನ ಮೂರ್ತಿಗಳಿದ್ದು ದಿನವು ಪೂಜೆಗೊಳ್ಳುತ್ತಿವೆ. ಈ ಮಾಲ್ಯವಂತ ಪರ್ವತವು ಕಮಲಾಪುರದಿಂದ ಒಂದೆರಡು ಕಿಲೋಮೀಟರ್ ದೂರದಲ್ಲಿ ಕಂಪ್ಲಿ ಗಂಗಾವತಿ ರಸ್ತೆಯ ಪಕ್ಕದಲ್ಲಿದೆ.



### ಹಜಾರಾಮ ದೇವಾಲಯ


ಹಂಪಿಯ ಪ್ರಮುಖ ದೇವಾಲಯಗಳಲ್ಲಿ ಈ ದೇವಸ್ಥಾನ ಸಹ ಒಂದಾಗಿದೆ. ಹಂಪಿಯ ಪ್ರಮುಖ ದೇವಾಲಯಗಳಲ್ಲಿ ಇದು ಸಹ ಒಂದಾಗಿದೆ. ಇದರ ಹೊರಬದಿಯ ಗೋಡೆಗಳಲ್ಲಿ ಅನೇಕ ಬಗೆಯ ಚಿತ್ರಗಳಿವೆ ದೇವಾಲಯದ ಒಳಗೋಡೆಯ ಹೊರಬದಿಯಲ್ಲಿ ಸಂಪೂರ್ಣ ರಾಮಾಯಣದ ಕಥೆ ಹೇಳುವ ದೃಶ್ಯಗಳಿವೆ. ದಶರಥ ಶ್ರವಣ ಕುಮಾರನಿಗೆ ಬಾಣ ಬಿಡುತ್ತಿರುವ ದೃಶ್ಯದಿಂದ ಪ್ರಾರಂಭಗೊಂಡು ಶ್ರೀರಾಮ ಜನನ ಸೀತಾಪರಣ ಹೀಗೆ ಸಂಪೂರ್ಣ ರಾಮಾಯಣವನ್ನು ಉಬ್ಬು ಶಿಲ್ಪಗಳಲ್ಲಿ ಕೆತ್ತಲಾಗಿದೆ. ಇದರಿಂದ ಶ್ರೀ ರಾಮನಿಗೆ ಹಂಪಿಗೂ ಇದ್ದ ಸಂಬಂಧವನ್ನು ಇದು ಸೂಚಿಸುತ್ತದೆ ಇಷ್ಟೇ ಅಲ್ಲ ಹಂಪಿಯ ಪ್ರದೇಶದಲ್ಲಿ ಹನುಮಂತನ ಸಾವಿರಾರು ಕೆತ್ತನೆ ಶಿಲ್ಪಗಳು ಮೂರ್ತಿಗಳು ಕಾಣ ಸಿಗುತ್ತದೆ.

### ಕೋದಂಡರಾಮ ದೇವಸ್ಥಾನ

ಹಂಪಿಯ ತುಂಗಾಭದ್ರಾ ನದಿಯ ಚಕ್ರ ತೀರ್ಥದ ದಡದಲ್ಲಿರುವ ಈ ಕೋದಂಡರಾಮ ದೇವಸ್ಥಾನ ವಿಶೇಷವಾಗಿದೆ. ಸುಗ್ರೀವನಿಗೆ ಶ್ರೀರಾಮ ಪಟ್ಟಾಭಿಷೇಕ ಮಾಡಿದ್ದು ಇಲ್ಲಿಯೇ ಎನ್ನಲಾಗಿದೆ. ಒಂದೇ ಶಿಲೆಯಲ್ಲಿ ಶ್ರೀರಾಮ, ಲಕ್ಷ್ಮಣ ಸೀತೆಯನ್ನು ಕೆತ್ತನೆ ಮಾಡಲಾಗಿದೆ. ಸುಗ್ರೀವನ ಕೆತ್ತನೆ ಇದೆ. ಹೀಗಾಗಿ ಇದು ಸುಗ್ರೀವನ ಪಟ್ಟಾಭಿಷೇಕ ದ ಧ್ಯೋತಕವಾಗಿದೆ. ಒಂಬತ್ತು ಅಡಿ ಎತ್ತರದ ಬಂಡೆಯಲ್ಲಿ ಈ ಶಿಲ್ಪಗಳನ್ನು ಕರೆಯಲಾಗಿದೆ. ಈ ದೇವಸ್ಥಾನದ ಮುಂಭಾಗದಲ್ಲೇ ಪಂಪಾ ವಿರೂಪಾಕ್ಷೇಶ್ವರ ಫಲಪೂಜೆ ಇತ್ಯಾದಿ ಪೂಜಾ ವಿಧಿವಿಧಾನಗಳು ನಡೆಯುತ್ತಿವೆ.

### ಪಟ್ಟಾಭಿರಾಮ ದೇವಸ್ಥಾನ

ವಿಜಯನಗರ ಸಾಮ್ರಾಜ್ಯದ ಪ್ರಮುಖ ದೇವಾಲಯಗಳಲ್ಲಿ ಪಟ್ಟಾಭಿರಾಮ ದೇವಸ್ಥಾನವು ಒಂದು. ಇದನ್ನು ರಘುನಾಥ ದೇವಾಲಯ ಎಂದು ಸಹ ಕರೆಯುತ್ತಾರೆ. ಇದು ಕಮಲಾಪುರದ ಹೊರವಲಯದಲ್ಲಿದ್ದು ವಿಶಾಲವಾದ ಪ್ರಾಂಗಣವನ್ನು ನಿರ್ಮಿಸಲಾಗಿದೆ. ಎತ್ತರವಾದ ಅದಿಷ್ಠಾನದ ಮೇಲೆ ನಿರ್ಮಿಸಲಾದ ಗರ್ಭಗೃಹ, ಅಂತರಾಳ, ಅರ್ಧ ಮಂಟಪ, ಪ್ರದಕ್ಷಿಣೆಪಥ, ಸಭಾ ಮಂಟಪ ಮತ್ತು ಮಹಾ ಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶ್ರೀರಾಮ ಲಕ್ಷ್ಮಣ ಮತ್ತು ಸೀತೆಯರ ಶಿಲ್ಪಗಳಿದ್ದ ಪೀಠ ಮಾತ್ರ ಉಳಿದಿವೆ ವಿಗ್ರಹಗಳು ಗರ್ಭಗೃಹದಲ್ಲಿ ಇರುವುದಿಲ್ಲ. ಹಂಪಿ ಪ್ರದೇಶವು ಕಿಷ್ಕಿಂದ ಪ್ರದೇಶವಾಗಿದ್ದರಿಂದ ವಿಜಯನಗರದ ಅರಸರು ತಮ್ಮ ಎಲ್ಲಾ ದೇವಸ್ಥಾನಗಳಲ್ಲಿ ಶಿಲ್ಪಗಳಲ್ಲಿ ಹನುಮನ ಶಿಲ್ಪಗಳನ್ನು ರಾಮಾಯಣದ ಕಥೆಗಳನ್ನು ಚಿತ್ರಿಸಿದ್ದಾರೆ. ಇಡೀ ಹಂಪಿ ಪ್ರದೇಶದಲ್ಲಿ ಹನುಮನ ದರ್ಶನವಾಗುತ್ತದೆ. ವಿಜಯನಗರದ ಆಡಳಿತದ ಕಾಲದಲ್ಲಿ ಹನುಮನ ಮೇಲಿನ ಭಕ್ತಿ ನಿಷ್ಠೆಗಾಗಿ ಕೋತಿಗಳಿಗಾಗಿ ಕೋತಿಈನಾಮು ಎಂದು ಹೆಸರಿನಲ್ಲಿ ನೂರಾರು ಎಕರೆ ಪ್ರದೇಶದ ತೋಟಗಳನ್ನು ಕೋತಿಗಳ ಆಹಾರಕ್ಕಾಗಿ ಬೆಳಸಿ ಬಿಟ್ಟಿರುವ ಚರಿತ್ರೆ ಇದೆ. ಒಟ್ಟಾರೆ ಹಂಪಿಯ ಪ್ರದೇಶದಲ್ಲಿ ಸುಮಾರು 14 ಶ್ರೀರಾಮನ ದೇವಾಲಯಗಳನ್ನು ನಿರ್ಮಿಸಿದ್ದರು ಎನ್ನುವ ಮಾತಿದೆ. ಆದರೆ ಈಗ ನಾಲ್ಕು ಐದು ದೇವಸ್ಥಾನಗಳು ಕಾಣಸಿಗುತ್ತವೆ. ಕಿಷ್ಕಿಂದೆ ಯಾಗಿದ್ದು ಹಂಪಿಯ ಪ್ರದೇಶದಲ್ಲಿ ಶ್ರೀ ರಾಮ ಓಡಾಡಿದ್ದು, ಇಲ್ಲಿಯೇ ಕೆಲಕಾಲ ತಂಗಿದ್ದ ಎನ್ನುವುದು ರೋಮಾಂಚನ ಸಂಗತಿಯಾಗಿದೆ. ಹಂಪಿ, ಅಂಜನಾದ್ರಿಗೂ ಹಾಗೂ ಅಯೋಧ್ಯಕ್ಕೂ ಸಂಬಂಧವಿದೆ. ಹೀಗಾಗಿ ಹಂಪಿಯ ಪ್ರದೇಶದಲ್ಲಿಯು ಶ್ರೀರಾಮನ ಸಂಭ್ರಮ ಮನೆಮಾಡಿದೆ. ಜೈ ಶ್ರೀರಾಮ್.





**ಹಂಪಿಯಲ್ಲಿರುವ ಮಾಲ್ಯವಂತ ಪರ್ವತ, ಹೇಮಕೋಟ, ಋಷಿಮೂಕ ಪರ್ವತ, ಜಂಬುನಾಥ ಪರ್ವತ, ವಾಣಿಭದ್ರೇಶ್ವರ, ತುಂಗಭದ್ರಾ ನದಿಯ ಶಬರಿ ಗುಹೆ ,ಅಂಜನಾದ್ರಿ ,ವಾಲಿ ಭಂಡಾರ, ಸುಗ್ರೀವ ಗುಹೆ, ಸೀತೆಯ ಸೆರಗು, ಮತಂಗ ಪರ್ವತ ಮೊದಲಾದವುಗಳು ವಾಲ್ಮೀಕಿ ರಾಮಾಯಣದಲ್ಲಿ ಬರುವ ಹೆಸರುಗಳಿಗೆ ಪೂರಕವಾಗಿವೆ. ಹೀಗಾಗಿ ಈ ಪ್ರದೇಶವನ್ನು ಕಿಷ್ಕಿಂದ ಎಂದು ಕರೆಯಲಾಗುತ್ತದೆ. ಈ ಪ್ರದೇಶದ ಭೌಗೋಳಿಕ ಲಕ್ಷಣಗಳು, ಮಹಾಕಾವ್ಯದಲ್ಲಿ ಹೆಸರಿಸಿರುವ ಹೆಸರುಗಳು, ಪುರಾಣಗಳು, ಸ್ಥಳ ಐತಿಹ್ಯಗಳನ್ನು ಕುರಿತು ಅಧ್ಯಯನ ಮಾಡಿದ್ದ ಪುರಾತತ್ವ ತಜ್ಞರಾದ ಡಾ.ಅ.ಸುಂದರ ಅವರು ಹಂಪಿ – ಆನೆಗುಂದಿ ಪ್ರದೇಶವೇ ಕಿಷ್ಕಿಂದವಾಗಿತ್ತು ಎಂದು ಅಭಿಪ್ರಾಯ ಪಟ್ಟಿದ್ದಾರೆ.**





ಹಂಪಿ ಟೈಮ್ಸ್ ವಿಶೇಷ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA